

ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTI BASAVANTAPPA HOSAMANI

Cell : +91 9741319119

Volume : 07 Issue : 11 Thursday 12-09-2024 E-mail : maruti.b.hosamani76@gmail.com Page: 4 Price : Rs. 1/-


# ಹಿಂದೂ ಮುಸ್ಲಿಂ ಸಮಾಜ ಸೇರಿಕೊಂಡು ಗಣೇಶ ಹಬ್ಬ ಅದ್ದೂರಿಯಾಗಿ ಆಚರಣೆ

**ದೇವೂರ :** ಒಟ್ಟಿನಲ್ಲಿ ಗಣೇಶ ಪ್ರತಿಷ್ಠಾಪನೆ ಎನ್ನುವುದು ಹಿಂದೂಗಳಿಗೆ ಮಾತ್ರ ಎಂಬ ಭಾವನೆಯನ್ನು ದೇವೂರ ಗ್ರಾಮದ ಮುಸ್ಲಿಂ ಯುವಕರು ದೂರ ಮಾಡಿದ್ದಾರೆ. ಹಿಂದೂ-ಮುಸ್ಲಿಂ ಯುವಕರು ಸೇರಿ ಪ್ರತಿ ವರ್ಷ ಗಣೇಶನ ಹಬ್ಬ ಆಚರಿಸುತ್ತಿರುವುದು ನಾವೆಲ್ಲರೂ ಒಂದೇ ಎಂಬ ಭಾವನೆ ಬೆಳೆಯುವುದಕ್ಕೆ ದೇವೂರ ಗ್ರಾಮದ ಯುವಕರು ಮಾದರಿಯಾದ್ದಾರೆ.

ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ಹತ್ತಿರ ದೇವೂರ ಗ್ರಾಮದಲ್ಲಿ ಅಂಬಿಗರ ಚೌಡಯ್ಯ ದೇವಾಸ್ಥಾನದಲ್ಲಿ ಪ್ರತಿ ವರ್ಷ ಗಣೇಶನನ್ನು ಪ್ರತಿಷ್ಠಾಪಿಸಿ ಐದು ದಿನಗಳ ಕಾಲ ಪೂಜಿಸುವುದರ ಮೂಲಕ ಭಾವೈಕ್ಯತೆಯ ಭಾವ ಮೆರೆದಿದ್ದಾರೆ. ಮುಸ್ಲಿಂ ಯುವಕರು ಹಿಂದೂ ಹಬ್ಬ ಆಚರಣೆ ಮಾಡುವ ಮೂಲಕ ನಾವೆಲ್ಲ ಒಂದೇ ಎಂಬ ಸಂದೇಶ ಸಾರಲಾಗಿದೆ. ಮುಸ್ಲಿಂ ಸಮುದಾಯದ ಯುವಕರಾದ ಪೈಗಂಬರ್ ನಧಾಪ, ಸಿಕಿಂದರ ನಧಾಪ,ರಫೀಕ್ ಮುಲ್ಲಾ, ರಾಜು ನಧಾಪ, ಬಂದಗಿಸಾಬ ನಧಾಪ, ಅಬ್ಬಾಸಲಿ ನಧಾಪ, ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿ ನಿತ್ಯ ಪೂಜೆ ಸಲ್ಲಿಸುವ ಮೂಲಕ ದೇವೂರ ಗ್ರಾಮದಲ್ಲಿ ಸಾಮರಸ್ಯದ ಸಂದೇಶ ಸಾರುತ್ತಿದ್ದಾರೆ.

ಅಬ್ಬಾಸಲಿ ಭಾಗವನ ಅವರು ದೇವೂರ ಗ್ರಾಮದಲ್ಲಿ ಎಲ್ಲಾ ಜಾತಿ ಜನಾಂಗದವರ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದಾರೆ.



ನಾವೆಲ್ಲರೂ ಕೂಡಿ ಇರೋಣ, ಮಾನವರು ನಾವೆಲ್ಲ ಒಂದೇ ಎಂಬ ತತ್ವದಲ್ಲಿ ಜೀವನ ಸಾಗಿಸ ಬೇಕೆಂದು ಹೇಳುತ್ತಾರೆ. ಬರೀ ಹೇಳುವುದೊಂದೇ ಅಲ್ಲ, ಅದರಂತೆ ನಡೆದುಕೊಂಡು ಬರುತ್ತಿದ್ದಾರೆ. ಒಂದು ಉತ್ತಮ ಸಂದೇಶವನ್ನು ಸಮಾಜಕ್ಕೆ ನೀಡುತ್ತಿದ್ದಾರೆ. ಕೂಡಿ ಬಾಳಿದರೆ ಸ್ವರ್ಗ ಸುಖ ಅನ್ನುತ್ತಾರಲ್ಲ ಹಾಗೆ.

ಮುಸ್ಲಿಂ ಹಬ್ಬ ಆಚರಣೆ ಮಾಡಿಕೊಂಡು ಬರುವ ಜೊತೆ ಹಿಂದೂ ಹಬ್ಬಗಳನ್ನು ಕೂಡ ಆಚರಣೆ ಮಾಡಿಕೊಂಡು ಬರುತ್ತಿದ್ದಾರೆ. ಗಣೇಶ ಚತುರ್ಥಿ ದಿನ ದಂದು ಗಣೇಶ ಪ್ರತಿಷ್ಠಾಪಿಸಿ ಐದು ದಿನಗಳ ಕಾಲ ನಿತ್ಯವೂ ಪೂಜೆ ಮಾಡುತ್ತಾರೆ. ಮಕ್ಕಳು ಕೂಡ ಗಣೇಶನ ಪೂಜೆಯಲ್ಲಿ ಭಾಗಿಯಾಗುತ್ತಾ-ರೆ. 10 ವರ್ಷಗಳಿಂದ ನಿರಂತರವಾಗಿ ಗಣೇಶನನ್ನು ಪ್ರತಿಷ್ಠಾಪಿಸುವುದರ ಮೂಲಕ ಸಾಂಪ್ರದಾಯಿಕಹಬ್ಬಕ್ಕೆಚಾಲನೆನೀಡಿನಂತರ ನಿತ್ಯ ಪೂಜೆ ಹಾಗೂ ಅನ್ನ ಸಂತರ್ಪಣೆ ಕೈಗೊಳ್ಳುತ್ತಿದ್ದಾರೆ. ಜಾತಿ ಬೆರೆಯಾದರು ನಾವೆಲ್ಲ ಮಾನವರು ಒಂದೆ ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಬರಬೇಕೆಂದು ಅಬ್ಬಾಸಲಿ ಭಾಗವಾನ್ ಅವರ ಮಾತಾಗಿದೆ.

ಪ್ರತಿ ಗಣೇಶ ಚತುರ್ಥಿ ನಮಗೆ ವಿಶೇಷ ಪ್ರತಿಷ್ಠಾಪನೆಯ ಆರಂಭದಿಂದ ಈ ಐದು ದಿನಗಳ ಕಾಲ ಗ್ರಾಮದ ಎಲ್ಲರೊಂದಿಗೆ ಬೆರೆತು ಭಕ್ತಿ ಭಾವದಿಂದ ಪೂಜಿಸಿ, ಅನ್ನ ಸಂತರ್ಪಣೆಕೈಗೊಂಡುಐದುದಿನದನಂತರ ಸಂಜೆ ಅದ್ದೂರಿ ಮೆರವಣಿಗೆ ಮೂಲಕ ಗಣೇಶನನ್ನು ವಿಸರ್ಜನೆ ಗೊಳಿಸುವುದರ ಮೂಲಕ ಹಬ್ಬವನ್ನು ಸಂಭ್ರಮಿಸುತ್ತೇವೆ ಎನ್ನುವ ಅಬ್ಬಾಸಲಿ ಬಾಗವಾನ ಮಾತನ್ನು ಹಾಗೂ ಎಲ್ಲ ಯುವಕರ ಕಾರ್ಯವನ್ನು ಗ್ರಾಮಸ್ಥರು ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ. ಗ್ರಾಮದವರಾದ ಮುದಕಪ್ಪ ಮೆಟಗಾರ, ಸಾಯಿನಾಥ್ ಕಂಬಾರ,ಸಂತೋಷ ಮೆಟಗಾರ್, ಭೀಮು ತಾಂಬೆ, ಲಕ್ಷ್ಮಣ ಆಳುರ,ಬೀರಣ್ಣ ಪೂಜಾರಿ, ಯಲ್ಲಾಲಿಂಗ ತಳವಾರ, ಮಲ್ಲಪ್ಪ ಮಸೀಬನಾಳ, ಅಕ್ಷಯ ತಳವಾರ,ಕುಮಾರ್ ಪೂಜಾರಿ ಸೇರಿದಂತೆ ಅವರ ಅನೇಕ ಸ್ನೇಹಿತರು ಸುತ್ತ ಮುತ್ತಲಿನ ಗ್ರಾಮಸ್ಥರು ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

**ಜಾತಿ ಬೆರೆಯಾದರು ನಾವೆಲ್ಲರೂ ಒಂದೇರಿ ವಿಶ್ವಾಸದಿಂದ ಬದುಕಬೇಕು. ನಾವು ನಮ್ಮ ಸಮುದಾಯದ ಹಬ್ಬದ ಜೊತೆ ಹಿಂದೂ ಹಬ್ಬ ಕೂಡ ಆಚರಣೆ ಮಾಡಿಕೊಂಡು ಬರುತ್ತಿದ್ದೇವೆ. ಸುಮಾರು ಹತ್ತು ವರ್ಷದಿಂದ ಗಣೇಶ ಮೂರ್ತಿ ಕೂಡಿಸಿ ಪೂಜೆ ಮಾಡಿಕೊಂಡು ಜಾತಿ, ಧರ್ಮ ಭೇದ, ಭಾವ ಮಾಡದೆ ಎಲ್ಲರೂ ಒಟ್ಟಾಗಿ ಅನ್ನ ಪ್ರಸಾದ ವ್ಯವಸ್ಥೆ ಮಾಡಿಕೊಂಡು ಬರುತ್ತಿದ್ದೇವೆ. ಸರ್ವರಿಗೂ ಅಲ್ಲಾ, ಸೃಷ್ಟಿಕರ್ತ ಭಗವಂತ ಒಳಿತನ್ನು ಮಾಡಲಿ ಎಂದು ಶುಭ ಹಾರೈಸಿದರು.**
**ಅಬ್ಬಾಸಲಿ ಭಾಗವಾನ್ ಗ್ರಾಮ ಪಂಚಾಯತ್ ಸದಸ್ಯರು ದೇವೂರ.**

ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ.ಇಲಕಲ್ಲ.

# "ಈ ಸಿನಿಮಾಗೆ ಕ್ಲೈಮ್ಯಾಕ್ಸ್ ಇರುವುದಿಲ್ಲ" ಚಲನ ಚಿತ್ರಕ್ಕೆ ಮುಹೂರ್ತ



**ಬೆಂಗಳೂರು :** ಸ್ನೇಹಾಲಯಂ ಕ್ರಿಯೇಷನ್ಸ್ ಬೆಂಗಳೂರ ಲಾಂಛನದಲ್ಲಿ ರಾಜೀವ್ಕೃಷ್ಣ ನಿರ್ಮಿಸುತ್ತಿರುವ "ಈ ಸಿನಿಮಾಗೆ ಕ್ಲೈಮ್ಯಾಕ್ಸ್ ಇರುವುದಿಲ್ಲ" ಎಂಬ ವಿಭಿನ್ನ ಟೈಟಲ್ ಇರುವ ಚಲನ ಚಿತ್ರಕ್ಕೆ ಹೊಸಕೋಟೆ ತಾಲ್ಲೂಕಿನ ಎಂ ಸತ್ಯವಾರದ ಶ್ರೀ ಮಹೇಶ್ವರಮ್ಮ ದೇವಿಯ ಸನ್ನಿಧಾನದಲ್ಲಿ ಮುಹೂರ್ತ ನೆರವೇರಿತು.

ಗ್ರಾಮ ಪಂಚಾಯತಿ ಅಧ್ಯಕ್ಷರಾದ ಕಮಲೇಶ ಅವರು ಕ್ಲಾಪ್ ಮಾಡಿದರೆ. ಎಂ.ಸತ್ಯವಾರದ ಸಮಾಜ ಸೇವಕರಾದ ನಾಗೇಶ್ ಅವರು ಕ್ಯಾಮರಾ ಗುಂಡಿ ಒತ್ತುವ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿದರು. ಗೋವಾಗೆ ಟ್ರಿಪ್ ಹೊರಡುವ ಆರುಮಂದಿ ಹುಡುಗ ಹುಡುಗಿಯರ ಜೀವನದಲ್ಲಿ ಆಗಂತುಕನೊಬ್ಬ ಎದುರಾದಾಗ ಬರುವ ಸಂಕಷ್ಟಗಳು ಹಾಗೂ ಅವುಗಳನ್ನು ಆರು ಮಂದಿ ಸ್ನೇಹಿತರು ಹೇಗೆ ಎದುರಿಸುತ್ತಾರೆ ಎಂಬ ಕಥಾ ವಸ್ತುವಿರುವ ಈ ಚಿತ್ರದಲ್ಲಿ ಟಾಲಿವುಡ್ ನ ಬಾಹುಬಲಿ ಖ್ಯಾತಿಯ ಕಾಲಕೇಯ ಪ್ರಭಾಕರ್ ಖಳನಾಯಕನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಹರಿ ಬಂಗಾರಪೇಟ್, ದೀನ ಉಪ್ಪಾಡ, ರಾಮ್ ಜನಾರ್ದನ್, ರೂಪಶ್ರೀ, ಕಾಲಕೇಯ ಪ್ರಭಾಕರ್, ಅಶೋಕ್ ರೆಡ್ಡಿ, ದೇವರಾಜ್, ಎಂ ವಿ ಸಮಯ್, ಬಲರಾಂ, ಮೊದಲಾದವರು ಅಭಿನಯಿಸುತ್ತಿದ್ದು ಈಗಾಗಲೇ ಕನ್ನಡ, ತೆಲುಗು ಚಲನಚಿತ್ರ ರಂಗದಲ್ಲಿ ಚಿರ ಪರಿಚಿತರಾಗಿರುವ ಯುವ ಉತ್ಸಾಹಿ ನಿರ್ದೇಶಕ ಆರ್. ಕೆ. ಗಾಂಧಿ ಚಿತ್ರಕ್ಕೆ ಕಥೆ ಚಿತ್ರಕಥೆ ಸಂಭಾಷಣೆ ಬರೆದು ನಿರ್ದೇಶನವನ್ನು ಮಾಡುತ್ತಿದ್ದಾರೆ.

ಎರಡೂವರೆ ಗಂಟೆಯ ಸಿನಿಮಾದಲ್ಲಿ "ಕ್ಲೈಮ್ಯಾಕ್ಸ್ ಇರುವುದಿಲ್ಲ" ಆದರೆ ಸಿನಿಮಾ ನೋಡಿದ ನಂತರ ಪ್ರೇಕ್ಷಕರೇ ಈ ಸಿನಿಮಾಕ್ಕೊಂದು ಒಳ್ಳೆಯ ಕ್ಲೈಮ್ಯಾಕ್ಸ್ ನೀಡಬೇಕೆಂದು ನಿರ್ದೇಶಕರು ವಿನಂತಿಸುತ್ತಾರೆ, ಅದರಂತೆ ಪ್ರೇಕ್ಷಕ ಪ್ರಭುಗಳು ನೀಡಿದ ಅತ್ಯುತ್ತಮ ಕ್ಲೈಮ್ಯಾಕ್ಸ್ ಗೆ ನಗದು ಬಹುಮಾನ ವಿತರಣೆ ಮಾಡಲು ಕೂಡ ಚಿತ್ರತಂಡ ನಿರ್ಧರಿಸಿದೆ.

ಸಕಲೇಶ್ವರ, ಮಂಗಳೂರು, ಬೆಂಗಳೂರು ,ಚಿಕ್ಕಬಳ್ಳಾಪುರ ಸುತ್ತ ಮುತ್ತ ಎರಡು ಹಂತಗಳಲ್ಲಿ ಚಿತ್ರೀಕರಣ ನಡೆಯಲಿದೆ. ಪ್ರಮೋದ್ ಆರ್ ಮತ್ತು ಬಿ ಯುವರಾಜ್ ಛಾಯಾಗ್ರಹಣ, ಅನಿರುದ್ಧ ಶಾಸ್ತ್ರಿ ಸಂಗೀತ, ಪ್ರತಾಪ್ ಭಟ್ ಹಾಗೂ ಆರ್. ಕೆ. ಗಾಂಧಿ ಸಾಹಿತ್ಯ, ಥ್ರಿಲ್ಲರ್ ಮಂಜು ಸಾಹಸ, ಸೂರ್ಯ ಕಿರಣ್ ನೃತ್ಯ ಸಂಯೋಜನೆ, ಮಲ್ಲಿಕಾರ್ಜುನ ಕಲೆ, ಮೋಹನ್ ಕುಮಾರ್ ಪ್ರಸಾಧನ, ಇಂದ್ರ ಸ್ಥಿರ ಚಿತ್ರಣ, ಪಿ.ಆರ್.ಓ ಎಂ. ಜಿ. ಕಲ್ಲೇಶ್, ಪತ್ರಿಕಾ ಸಂಪರ್ಕ ಡಾ, ಪ್ರಭು ಗಂಜಿಹಾಳ, ಡಾ, ವೀರೇಶ್ ಹಂಡಗಿ, ನಿರ್ಮಾಣ ನಿರ್ವಹಣೆ ಅಶೋಕ್ ರೆಡ್ಡಿ ಅವರದಿದೆ.

ಎಲ್ಲವೂ ಅಂದುಕೊಂಡಂತೆ ಆದಲ್ಲಿ ನವೆಂಬರ್ ತಿಂಗಳ ಅಂತ್ಯದಲ್ಲಿ ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ಯೋಜನೆ ರೂಪಿಸಿ ಕೊಂಡಿದೆ. ಕನ್ನಡ, ತೆಲುಗು, ಎರಡು ಭಾಷೆಗಳಲ್ಲಿ ಚಿತ್ರವನ್ನು ನಿರ್ಮಿಸಲಾಗುತ್ತಿದೆ ಎಂದು ನಿರ್ದೇಶಕ ಆರ್. ಕೆ.ಗಾಂಧಿ ಹೇಳುತ್ತಾರೆ.

**ವರದಿ: ಡಾ.ಪ್ರಭು ಗಂಜಿಹಾಳ**
**ಮೊ:9448775346**

# ಕರ ವಸೂಲಿ ನೌಕರ ಶೌಚಾಲಯದಲ್ಲಿ ಹೃದಯ-ಘಾತದಿಂದ ಸಾವು

**ಖಾನಾ ಹೊಸಹಳ್ಳಿ :** ಖಾನ ಹೊಸಹಳ್ಳಿ ಹೋಬಳಿಯ ಸಮೀಪದ ಹೂಡೇಂ ಗ್ರಾಮ ಪಂಚಾಯಿತಿ ಕರ ವಸೂಲಿ ನೌಕರ ಮಂಜಣ್ಣ ಚೌಟಯ್ಯನಹಟ್ಟಿ 51, ಹೃದಯ ಘಾತದಿಂದ ಸಾವನ್ನಪ್ಪಿರುವ ಘಟನೆ ಕೂಡ್ಲಿಗಿ ತಾಲೂಕಾ ಪಂಚಾಯಿತಿ ಶೌಚಾಲಯದಲ್ಲಿ ನಡೆದಿದೆ.

ಮೃತ ಮಂಜಣ್ಣ ಕೂಡ್ಲಿಗಿ ತಾಲೂಕಾ ಪಂಚಾಯಿತಿಯಲ್ಲಿ ಸೋಮವಾರ ಬಿಲ್ ಕಲೆಕ್ಟರ್ ಮೀಟಿಂಗ್ ಗೆ ಹಾಜರಾಗಿದ್ದು, ಮೀಟಿಂಗ್ ಮುಗಿದ ನಂತರ ಶೌಚಾಲಯಕ್ಕೆ ಹೋಗಿದ್ದು, ಮರಳಿ ವಾಪಸ್ ಮನೆಗೆ ಬಾರದ ಕಾರಣ ಕುಟುಂಬದವರು ಗಾಬರಿಗೊಂಡು



ಫೋನ್ ಮಾಡಿದರೂ ಫೋನ್ ಸ್ವಿಚ್ ಆಫ್ ಆದಕಾರಣ ಎಲ್ಲಾ ಕಡೆ ಹುಡುಕಿದರೂ ಸಿಗದ ಕಾರಣ, ಮಂಗಳವಾರ ಬೆಳಿಗ್ಗೆ ತಾಲೂಕಾ ಪಂಚಾಯತಿ ಕಚೇರಿಯ ಸಿಸಿಟಿವಿ ವೀಕ್ಷಿಸುವಾಗ ಶೌಚಾಲಯಕ್ಕೆ ಹೋಗಿ ಮರಳಿ ಹಿಂತಿರುಗದೆ ಶೌಚಾಲಯದಲ್ಲಿ ಹೃದಯ ಘಾತದಿಂದ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಸ್ಥಳದಲ್ಲಿ ಕೂಡ್ಲಿಗಿ ಪಿ.ಎಸ್.ಐ ಪ್ರಕಾಶ್, ತಾಲೂಕ ಪಂಚಾಯತಿ ಇ.ಓ ನರಸಪ್ಪ ಹಾಜರಿದ್ದರು. ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ**

# ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಚನ್ನದಾಸರ ಸಮುದಾಯದ ಸ್ನೇಹಾ ಕಲಹಾಳ ಆಯ್ಕೆ

**ಹೊಳೆ ಆಲೂರು :** ಗದಗ ಜಿಲ್ಲೆಯ ರೋಣ ತಾಲೂಕಿನ ಹೊಳೆ ಆಲೂರು ಗ್ರಾಮದ ಚನ್ನದಾಸರ ಸಮುದಾಯದ ಗದಗ ಜಿಲ್ಲೆಯ ಮುಂಡರಗಿಯ ನವೋದಯ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ, ಸ್ನೇಹ ಚಂದ್ರಶೇಖರ ಕಲಹಾಳ ಆಂಧ್ರಪ್ರ ದೇಶದ ಚಿತ್ತೂರಿನಲ್ಲಿ ಆಗಸ್ಟ್ 22 ರಂದು ಜರುಗಿದ. ನವೋದಯ ಮಹಾವಿದ್ಯಾಲಯಗಳ ಅಂತರ್ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ, ಜವಾಲಿನ್ ಥ್ರೋ ಹಾಗೂ ಹ್ಯಾಮರ್ ಕ್ರೀಡೆಯಲ್ಲಿ ಪ್ರಥಮ ಸ್ಥಾನಗಳಿಸಿ ಜಾರ್ಖಂಡದಲ್ಲಿ ಜರುಗುವ ರಾಷ್ಟ್ರ ಮಟ್ಟದ ಕ್ರೀಡೆಗೆ ಆಯ್ಕೆಯಾಗಿದ್ದಾಳೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಶಿವಾನಂದ. ಎಫ್.ಗೋಗೇರಿ.ತೋಟಗುಂಟಿ.ಗದಗ.**



# ಶಾಲಾ ಮಕ್ಕಳಲ್ಲಿ ಡೆಂಗ್ಯೂ ತಡೆ-ಪ್ರತಿಜ್ಞಾ ವಿಧಿ ಬೋಧನೆ

**ಗುಂಡನಪಲ್ಲೆ :** ಬಾಗಲಕೋಟೆ ಜಿಲ್ಲೆಯ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ ಕೀಟಜನ್ಯ ಆಶ್ರಿತ ರೋಗವಾಹಕ ರೋಗಗಳ ತಡೆಗೆ, ಗುಂಡನಪಲ್ಲೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಶಾಲಾ ಮಕ್ಕಳಿಗೆ "ಸೊಳ್ಳೆ ನಿರ್ಮೂಲನೆ ಪ್ರತಿಜ್ಞೆ ವಿಧಿ ಬೋಧನೆ" ಆರೋಗ್ಯ ಜಾಗೃತಿ ಆಯೋಜಿಸಲಾಗಿತ್ತು.

ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಎಸ್ ಅಂಗಡಿಯವರು, ಕಡಿತ ಚಿಕ್ಕದು ಅಪಾಯ ದೊಡ್ಡದು ಘೋಷಣೆಗಳೊಂದಿಗೆ, ಶಾಲಾ ಮಕ್ಕಳಿಗೆ ಸೊಳ್ಳೆಗಳ ಕಡಿತದಿಂದ ಬರುವ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ ಆನೆಕಾಲು ಮೆದುಳು ಜ್ವರ ಡೆಂಗ್ಯೂ ಚಿಕೂನ್ ಗುನ್ಯಾ ಝಿಕಾ ಸೋಂಕು ತಡೆಯಲು ಮುನ್ನೆಚ್ಚರಿಕೆ ಕ್ರಮಗಳ ಪಾಲನೆ ವಿದ್ಯಾರ್ಥಿಗಳ ಭಾಗವಹಿಸುವಿಕೆಯ ಮಹತ್ವ ಹಾಗೂ ಸ್ವಯಂ ರಕ್ಷಣಾ ವಿಧಾನಗಳನ್ನು ಅನುಸರಿಸುವದರ ಬಗ್ಗೆ ಹಾಗೂ ಪಾಲಕರು ನೆರೆ ಹೊರೆ ಜಾಗೃತಿ ಮೂಡಿಸುವುದು. ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆ ನಮ್ಮ ಗುರಿಯಾಗಬೇಕು ಮನೆ ಸುತ್ತ ಮುತ್ತ ಪರಿಸರ ಸ್ವಚ್ಛತೆ, ಕಾಪಾಡಿ ಕೊಳ್ಳಬೇಕು ಸೊಳ್ಳೆ ಪರದೆ ನಿರೋಧಕ ಬಳಸಬೇಕು ನೀರಿನ ಸಂಗ್ರಹಗಳ ಮೇಲೆ ತಪ್ಪದೇ ಮುಚ್ಚಳಿಕೆ ಹಾಕಬೇಕು. ಅನುಪಯುಕ್ತ ಟೆಂಗಿನ ಚಿಪ್ಪು ಒಡೆದ ಬಾಟಲ್ ಟೈರ್ ಟ್ಯೂಬ್ ಕಸ ವಿಲೇವಾರಿ ಮಾಡಬೇಕು ಆರೋಗ್ಯ ನಿರೀಕ್ಷಣಾಧಿಕಾರಿಗಳು ತಮ್ಮ ಮನೆಗೆ ಬಂದಾಗ ಸರಿಯಾದ ಮಾಹಿತಿ ನೀಡಿ ಸಹಕರಿಸ ಬೇಕು. ಯಾವುದೇ ತರಹ ಜ್ವರ ಕಾಣಿಸಿದರೆ ಹತ್ತಿರದ ಸರಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆ ಚಿಕಿತ್ಸೆ ಉಚಿತವಾಗಿರುತ್ತದೆ. ಶಾಲಾ ಮಕ್ಕಳಲ್ಲಿ ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆ ಜಾಗೃತಿ ಪ್ರತಿಜ್ಞೆ ವಿಧಿ ಬೋಧನೆ ಮಾಡಿದರು. "ಆರೋಗ್ಯ ಜಾಗೃತಿ" ಕಾರ್ಯಕ್ರಮದಲ್ಲಿ ಶಾಲಾ ಮುಖ್ಯ ಶಿಕ್ಷಕ ಸಂಗಪ್ಪ ಜಿ ಹುನಗುಂದ, ಸಹ ಶಿಕ್ಷಕರಾದ ಆರ್.ಬಿ ಅಂತರತಾನಿ, ರಾಜೇಶ ಹುಲಗನ್ನವರ, ನಾರಾಯ-ಣಗೌಡ ಪಾಟೀಲ್, ಗುರು ಮಾತೆಯರಾದ ಭಾರತಿ ಗಣಿಯಾರ, ಅನಿತಾ ಗದಿಗೆನ್ನವರ, ಸುನಿತಾ ಮಾಸ್ತಿ, ಶಾಲಾ ಮುದ್ದು ಮಕ್ಕಳು ಉತ್ಸಾಹದಿಂದ ಭಾಗವಹಿಸಿದ್ದರು.






# ನಾಡಿನ ಹೆಸರಾಂತ ನಟಿ ಉಮಾಶ್ರೀಗೆ ಗೌರವ ಡಾಕ್ಟರೇಟ್: ಒಡಲಾಳದ ಸಾಕವ್ವ ಈಗ ಡಾಕ್ಟರ್ ಉಮಾಶ್ರೀ

**-ಕಿರಣ ಶ್ರೀಶೈಲ ಆಳಗಿ.**

**ರಬಕವಿ-ಬನಹಟ್ಟಿ :** ಕನ್ನಡ ಚಿತ್ರರಂಗದಲ್ಲಿ ವಿಭಿನ್ನವಾದ ಪಾತ್ರಗಳನ್ನು ಮಾಡಿ ಜನಾನುರಾಗಿಯಾಗಿರುವ ಒಡಲಾಳದ ಸಾಕವ್ವ ತೇರದಾಳ ವಿಧಾನ ಸಭಾ ಮತಕ್ಷೇತ್ರದ ಮಾಜಿ ಶಾಸಕಿ, ಮಾಜಿ ಸಚಿವೆ ಹಾಗೂ ಹಾಲಿ ವಿಧಾನಪರಿಷತ್ ಸದಸ್ಯೆ ಉಮಾಶ್ರೀ ಅವರಿಗೆ ಬಳ್ಳಾರಿಯ ಶ್ರೀ ಕೃಷ್ಣದೇವರಾಯ ವಿಶ್ವ ವಿದ್ಯಾಲಯವು ಗೌರವ ಡಾಕ್ಟರೇಟ್ ಘೋಷಣೆ ಮಾಡಿದೆ.

ರಂಗಭೂಮಿ, ಕಲೆ ಮತ್ತು ಸಮಾಜ ಸೇವೆ ಎಲ್ಲಾ ವಿಭಾಗದಲ್ಲಿ ಸಾಧನೆಗೈದ ನಟಿ ಉಮಾಶ್ರೀ ಅವರಿಗೆ ಇಂದು ಸಪ್ಟೆಂಬರ ಆರರಂದು ಬಳ್ಳಾರಿಯ ವಿಶ್ವ ವಿದ್ಯಾಲಯದ ಆವರಣದಲ್ಲಿ ನಡೆಯುವ ಘಟಿಕೋತ್ಸವ ಸಮಾರಂಭದಲ್ಲಿ ಅವರಿಗೆ ಪ್ರಧಾನ ಮಾಡಲಾಗುತ್ತಿದೆ. ಕಳೆದ ತಿಂಗಳು ಅವರಿಗೆ ಜೀವಮಾನದ ಸಾಧನೆಗಾಗಿ ನಾಟಕ ಅಕಾಡೆಮಿಯ ಪ್ರಶಸ್ತಿ ಕೂಡಾ ಲಭಿಸಿತ್ತು.

ರಂಗಾಯಣ ರಂಗಭೂಮಿಯಲ್ಲಿ ದೇವನೂರು ಮಹಾದೇವ ರಚಿಸಿದ 'ಒಡಲಾಳ' ನಾಟಕದಲ್ಲಿ ಸಾಕವ್ವಳಾಗಿ ಅಪ್ರತಿಮ ನಟನೆ ಮಾಡುವುದರ ಮೂಲಕ ಪಾತ್ರಕ್ಕೆ ಜೀವ ತುಂಬಿದ ಖ್ಯಾತಿಯಿಂದಾಗಿ ಇಡೀ ರಾಜ್ಯದ ಮೂಲೆ ಮೂಲೆಗೂ ಉಮಾಶ್ರೀಯವರ ಹೆಸರು ಪಸರಿಸುವಂತಾಯಿತು. ಅಲ್ಲದೆ ಈ ಪಾತ್ರವು ಉಮಾಶ್ರೀಯವರಿಗೆ ಒಂದು ಪಾಠವಾಗಿಯೂ ಪರಿಣಮಿಸಿ ಇಂದು ಮನೆಮಾತಾಗಿರುವ ಉಮಾಶ್ರೀ ನಿಜಕ್ಕೂ ಅಪ್ರತಿಮ ಹೋರಾಟಗಾರ್ತಿ.

**ಜೀವನ :** ಮೂಲತಃ ತುಮಕೂರ ಜಿಲ್ಲೆಯ ನೊಣವಿನಕೆರೆ ಗ್ರಾಮದಲ್ಲಿ ಮೇ 10, 1957 ರಂದು ಡಿ. ಮುನಿನರಸಪ್ಪ ಮತ್ತು ರೇವಮ್ಮರ ಪುತ್ರಿಯಾಗಿ ಜನಿಸಿದ ಇವರಿಗೆ ಇಬ್ಬರು ಮಕ್ಕಳು. ಮೊದಲನೆಯವರು, ಡಾ. ಗಾಯತ್ರಿ ರಮೇಶ ಎರಡನೆಯವರು ವಿಜಯಕುಮಾರ ಎಸ್. ( ಬಾಬು ) ನ್ಯಾಯವಾದಿ.

ರಂಗಾಯಣದಲ್ಲಿ 35 ವರ್ಷಗಳ



ಅನುಭವವಿರುವ ಇವರು, ಕಲಾದೇವಿಯ ಆರಾಧಕರು. ಇವರು ಬಿ.ವಿ. ಕಾರಂತ, ಗಿರೀಶ ಕಾರ್ನಾಡ, ಸಿ. ಜಿ. ಕೃಷ್ಣಸ್ವಾಮಿ, ಆರ್. ನಾಗೇಶ, ಟಿ. ಎಸ್. ನಾಗಾಭರಣ ಮುಂತಾದ ಪ್ರಸಿದ್ಧ ನಿರ್ದೇಶಕರ ಕೆಳಗೆ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ರಂಗ ಸಂಪದದ ಸಕ್ರಿಯ ಸದಸ್ಯೆಯಾಗಿರುವ ಅವರು ನೂರಕ್ಕೂ ಹೆಚ್ಚು ವಿವಿಧ ಪಾತ್ರಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು, ಆರು ಸಾವಿರಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ. ಇದರ ಜೊತೆ ಚಿತ್ರರಂಗದ ನಂಟನ್ನು ಬೆಳೆಸಿಕೊಂಡ ಇವರು ಸದ್ಯ ನಾಲ್ಕು ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಇವರ ಅಮೋಘ ಅಭಿನಯಕ್ಕಾಗಿ 1999-2000 ದಲ್ಲಿ ಬಂಗಾರದ ಪದಕದೊಂದಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಆರು ಸಲ ಅತ್ಯುತ್ತಮ ಸಹಾಯಕ ನಟಿ ಬಿರುದು, ಗುಲಾಬಿ ಟಾಕೀಜ್ ಚಿತ್ರಕ್ಕೆ ಅಂತರಾಷ್ಟ್ರೀಯ ಪ್ರಶಸ್ತಿ, ಜೊತೆಗೆ ಹಲವಾರು ರಾಷ್ಟ್ರೀಯ ಪ್ರಶಸ್ತಿ, ಅಲ್ಲದೇ ಟೀವಿ ಮಾಧ್ಯಮದಲ್ಲೂ ತಮ್ಮ ಅತ್ಯುತ್ತಮ ಅಭಿನಯದ ಮೂಲಕ ಪ್ರಶಸ್ತಿ ಮತ್ತು ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಸಿನಿಮಾದೊಂದಿಗೆ ತಮ್ಮ ರಾಜಕೀಯ ನಂಟನ್ನು ಬೆಳೆಸಿಕೊಂಡ ಇವರು ಹಂತ ಹಂತವಾಗಿ ಬೆಳೆಯುತ್ತಾ ಬಂದವರು. ಕೆಪಿಸಿಸಿ ಸದಸ್ಯೆಯಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಎಐಸಿಸಿ ಸದಸ್ಯೆಯಾಗಿ, ಕಾಂಗ್ರೆಸ್ ಪಕ್ಷದಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಾ ಕಾಂಗ್ರೆಸ್ನಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದವರು. ತೇರದಾಳ ಮತಕ್ಷೇತ್ರದ ಜನಪ್ರಿಯ ಶಾಸಕಿಯಾಗುವುದರ ಜೊತೆಗೆ ಸಿದ್ರಾಮಯ್ಯನವರ ಮಂತ್ರಿಮಂಡಲದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿ ಕೆಲಸ ಮಾಡಿದ್ದಾರೆ. ಸಧ್ಯ ವಿಧಾನಪರಿಷತ್ ಸದಸ್ಯೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕನ್ನಡ ರಂಗಭೂಮಿ ಮತ್ತು ಚಲನಚಿತ್ರರಂಗದ ಪ್ರತಿಭಾನ್ವಿತ ಅಭಿನೇತ್ರಿ. ಕೆಲವೊಂದು ವೈಶಿಷ್ಟ್ಯಪೂರ್ಣ ಪಾತ್ರಗಳಲ್ಲಿ ಆಕೆ ತನ್ನ ಕಂಗಳಲ್ಲೇ ತುಂಬಿ ಕೊಡುವ ನಟನೆಯ ಪೂರ್ಣತ್ವ ಅಪ್ರತಿಮವಾದದ್ದು. ಬದುಕಿಗಾಗಿ ಕಲೆಯನ್ನು ಅನಿವಾರ್ಯವಾಗಿ ಅಪ್ಪಿಕೊಂಡ ಉಮಾಶ್ರೀ ಅದಕ್ಕೆ ತೋರಿದ ಶ್ರದ್ಧೆ, ನಿಷ್ಠೆ ಮಾತ್ರ ಅನನ್ಯವಾದದ್ದು. ಉಮಾಶ್ರೀ ತಮ್ಮ ಪಾತ್ರಕ್ಕೆ ನೀಡುವ ಹೊಳಪು ಎಲ್ಲರ ನೆನಪಲ್ಲಿ ಉಳಿಯುವಂತಹದ್ದು. ಕಷ್ಟ ಕೋಟಲೆಗಳಲ್ಲಿ ಬೆಳೆದು ಬಂದ 'ಉಮಾಶ್ರೀ' ತನ್ನ ದಿಟ್ಟತನದಿಂದ ಚಿತ್ರರಂಗದ ಬದುಕನ್ನು ಉನ್ನತ ಸಾಧನೆಯವರೆಗೆ ನಡೆಸಿರುವ ರೀತಿ ಮೆಚ್ಚುವಂತದ್ದು.

ರಾಜ್ಯಶಾಸ್ತ್ರ ವಿಷಯದಲ್ಲಿ ಎಂ. ಎ. ಪದವಿಯನ್ನು ಪೂರೈಸಿರುವ ಉಮಾಶ್ರೀ ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಈಗ ಶ್ರೀ ಕೃಷ್ಣ ದೇವರಾಯ ವಿಶ್ವ ವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸುತ್ತಿರುವುದು ಹೆಮ್ಮೆಯ ವಿಷಯ.

ಈ ಸಂದರ್ಭದಲ್ಲಿ ರಬಕವಿಯ ಕಾಂಗ್ರೆಸ್ ಪಕ್ಷದ ಧುರೀಣ ಸಂಗಪ್ಪ ಕುಂದಗೋಳ, ಬಸವರಾಜ ಗುಡೋಡಗಿ, ಮೇಣಿ, ಸತ್ಯಪ್ಪ ಮಗದುಮ್ ಮೊದಲಾದವರು ಹಾಗೂ ಅದರಲ್ಲೂ ತೇರದಾಳ ಮತಕ್ಷೇತ್ರದ ಜನತೆ ಅವರ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿ ಹೃದಯಾರೆ ಅಭಿನಂದಿಸಿದ್ದಾರೆ.

# ವಿವಿಧ ಉಚಿತ ತರಬೇತಿಗಳಿಗೆ ಅರ್ಜಿ

**ಬಾಗಲಕೋಟೆ :** ಜಿಲ್ಲಾ ಪಂಚಾಯತ, ಬಿವಿವ ಸಂಘದ ಕೋಟೆಕ್ ಮಹೀಂದ್ರಾ ಬ್ಯಾಂಕ್ ಆರ್.ಸೆಟ್ ಸಂಸ್ಥೆಯ ಸಹಯೋಗದಲ್ಲಿ ಗ್ರಾಮೀಣ ಭಾಗದ ಯುವಕ, ಯುವತಿಯರಿಗೆ ಉಚಿತ ತರಬೇತಿ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿ ಊಟ ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿದ್ದು, ಆಸಕ್ತರು ವಿದ್ಯಾಗಿರಿ ಎಂ.ಬಿ.ಎ ಕಾಲೇಜ ಹತ್ತಿರವಿರುವ ಬಿವಿವ ಸಂಘದ ಕೋಟೆಕ್ ಮಹೀಂದ್ರಾ ಬ್ಯಾಂಕ್ ಆರ್.ಸೆಟ್ ಸಂಸ್ಥೆಯಲ್ಲಿ ಈ ಕೆಳಕಂಡ ವಿವಿಧ ತರಬೇತಿಗಳಿಗೆ ಹೆಸರನ್ನು ನೋಂದಣಿ ಮಾಡಿ, ಸಂದರ್ಶನಕ್ಕೆ ಹಾಜರಾಗಬೇಕು. 10 ದಿನಗಳ ಅಣಬೆ ಕೃಷಿ ತರಬೇತಿಗೆ ಸಂದರ್ಶನ ದಿನ ಸೆಪ್ಟೆಂಬರ 10, 30 ದಿನಗಳ ಮಹಿಳೆಯರ ಸೌಂದರ್ಯವರ್ಧಕ ತರಬೇತಿಗೆ ಸೆಪ್ಟೆಂಬರ 4 ರಂದು ನಡೆಯಲಿದೆ.

30 ದಿನಗಳ ಗೃಹೋಪಯೋಗಿ ವಿದ್ಯುತ್ ಉಪಕರಣ ದುರಸ್ಥಿ ತರಬೇತಿಗೆ ಸಂದರ್ಶನ ಸೆಪ್ಟೆಂಬರ 30, 10 ದಿನಗಳ ಕುರಿ ಸಾಕಾಣಿಕೆ ತರಬೇತಿಗೆ ಸಂದರ್ಶನ ಸೆಪ್ಟೆಂಬರ 9, 30 ದಿನಗಳ ಬಡಿಗತನ ತರಬೇತಿಗೆ ಸಂದರ್ಶನ ಸೆಪ್ಟೆಂಬರ 24 ನಡೆಯಲಿದೆ ಎಂದು ಕೋಟೆಕ್ ಮಹೀಂದ್ರಾ ಬ್ಯಾಂಕ್ ಆರ್‌ಸೆಟ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊನಂ.9113615059, 08354-295681ಗೆ ಸಂಪರ್ಕಿಸಬಹುದಾಗಿದೆ.

# ಸೆಪ್ಟೆಂಬರ ಮಾಹೆಯ ಪಡಿತರಧಾನ್ಯ ವಿತರಣೆ

**ಬಾಗಲಕೋಟೆ :** ರಾಷ್ಟ್ರೀಯ ಆಹಾರ ಭದ್ರತಾ ಹಾಗೂ ಪಿಎಂಜಿಕೆಎವೈ ಯೋಜನೆಯಡಿ ಸೆಪ್ಟೆಂಬರ-2024ರ ಮಾಹೆಗೆ ಚಾಲ್ತಿಯಲ್ಲಿರುವ ಪಡಿತರ ಚೀಟಿದಾರರಿಗೆ ಪಡಿತರಧಾನ್ಯವನ್ನು ಬಿಡುಗಡೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದ್ದಾರೆ. ಅಂತ್ಯೋದಯ ಕಾರ್ಡದಾರರಿಗೆ ಪ್ರತಿ ಪಡಿತರ ಚೀಟಿಗೆ 21 ಕೆಜಿ ಅಕ್ಕಿ ಹಾಗೂ 14 ಕೆಜಿ ಜೋಳ ಸೇರಿ ಒಟ್ಟು 35 ಕೆಜಿ ಆಹಾರಧಾನ್ಯವನ್ನು ಉಚಿತವಾಗಿ ನೀಡಲಾಗುತ್ತಿದೆ. ಬಿಪಿಎಲ್ ಮತ್ತು ಆದ್ಯತಾ ಪಟಿತರ ಚೀಟಿದಾರರಿಗೆ ಪ್ರತಿ ಸದಸ್ಯರಿಗೆ 3 ಕೆಜಿ ಅಕ್ಕಿ, 2 ಕೆಜಿ ಜೋಳ ಸೇರಿದಂತೆ ಒಟ್ಟು 5 ಕೆಜಿ ಆಹಾರಧಾನ್ಯವನ್ನು ಉಚಿತವಾಗಿ ನೀಡಲಾಗುತ್ತಿದೆ. ಒನ್ ನೇಷನ್ ಒನ್ ರೇಷನ್ ವ್ಯವಸ್ಥೆಯಡಿ ಅಂತರರಾಜ್ಯ ಫಲಾನುಭವಿಗಳು ಪಡಿತರವನ್ನು ಪ್ರತಿ ಸದಸ್ಯರಿಗೆ 5 ಕೆಜಿ ಉಚಿತವಾಗಿ ನೀಡಲಾಗುತ್ತದೆ.

ಈ ಮಾಹೆಯಲ್ಲಿ ಪ್ರಾರಂಭದಿಂದ ತಿಂಗಳ ಕೊನೆಯವರೆಗೆ ಬೆಳಿಗ್ಗೆ 8 ರಿಂದ ರಾತ್ರಿ 8 ವರಗೆ ಪಡಿತರ ವಿತರಣೆ ಕಾರ್ಯ ಜರುಗಲಿದೆ. ತಮಗೆ ಹಂಚಿಕೆ ಮಾಡಿದ ಆಹಾರಧಾನ್ಯವನ್ನು ಕಳಸಂತೆಯಲ್ಲಿ ಮಾರಾಟ ಮಾಡಿದರೆ ಅಂತಹವರ ಪಡಿತರ ಚೀಟಿಯನ್ನು ರದ್ದುಪಡಿಲು ಕ್ರಮವಹಿಸಲಾಗುವುದು. ಕಾಳಸಂತೆಯಲ್ಲಿ ಅನಧಿಕೃತ ಆಹಾರಧಾನ್ಯ ದಾಸ್ತಾನು ಮಾಡುವವರ ವಿರುದ್ಧ ಕ್ರಮಜರುಗಿಸಲಾಗುವುದು.

ಈ ಬಗ್ಗೆ ದೂರುಗಳಿದ್ದಲ್ಲಿ ಸಂಬಂಧಿಸಿದ ತಹಶೀಲ್ದಾರ ಕಚೇರಿ ಅಥವಾ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

# ತಳವಾರರಿಗೆ ಒಂದು, ಬೇರೆಯವರಿಗೆ ಒಂದು ಸಂವಿಧಾನವೇ

**ಜಮಖಂಡಿ :** ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ನಕಲು ಜಾತಿ ಪ್ರಮಾಣಪತ್ರ ತಡೆ ಸಮಿತಿ ಸಹಿತ ಹಲವರು ಅಧಿಕಾರಿಗಳನ್ನು ಬಳಸಿಕೊಂಡು ಸುಳ್ಳು ಸುತ್ತೋಲೆಗಳನ್ನು ಹೊರಡಿಸುವ ಮೂಲಕ ಸಂವಿಧಾನವನ್ನು ದುರ್ಬಲಗೊಳಿಸುತ್ತಿರುವದು ಅಕ್ಷಮ್ಯ ಅಪರಾಧವಾಗಿದೆ ಎಂದು ರಾಜ್ಯ ತಳವಾರ ಮಹಾಸಭಾ ನಗರ ಘಟಕ ಅಧ್ಯಕ್ಷ ರಾಮಪ್ಪ ಷಣ್ಮುಖಪ್ಪ ತಳವಾರ ಹೇಳಿದರು.



ನಗರದತಾಲೂಕಾಡಳಿತಭವನದಆವರಣದಲ್ಲಿ ತಾಲೂಕ ತಳವಾರ ಸಮಾಜ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಉಪವಿಭಾಗಾಧಿಕಾರಿ ಶ್ವೇತಾ ಬಿಡಕರ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಈ ಹಿಂದೆ ಸರಕಾರದ ಕಾಯ್ದೆ ಜಾರಿಗೊಳಿಸಿದಂತೆ ಸರಕಾರದ ಮೇಲೆ ಸಾಕಷ್ಟು ಒತ್ತಡ ಹೇರುತ್ತಿದ್ದರು. ಸರಕಾರದ ಕಾನೂನು ಜಾರಿಗೆ ಬಂದ ನಂತರ ಕೂಡ ಸರಕಾರದ ಅಧಿಕಾರಿಗಳ ವಿರುದ್ದ ಇಲ್ಲಸಲ್ಲದ ಆರೋಪ ಮಾಡಿ ಬೆದುರುಸುತ್ತಿದ್ದಾರೆ. ತಳವಾರ ಜಾತಿಯವರಿಗೆ ಒಂದು ಸಂವಿಧಾನ ಮತ್ತು ಬೇರೆ ಜಾತಿಯವರಿಗೆ ಮತ್ತೊಂದು ಸಂವಿಧಾನ ಇದೆಯೇ? ಎಲ್ಲರಿಗೂ ಒಂದೇ ಸಂವಿಧಾನ ಅದರ ಅಡಿಯಲ್ಲಿ ಜಾತಿ ಪ್ರಮಾಣ ಪತ್ರ ವಿತರಣೆಯಾಗುತ್ತಿವೆ ಎಂದರು.

ಭಾರತ ಸರಕಾರ ಮತ್ತು ಸಂವಿಧಾನ ಸಂಸತ್ತು ಎಸ್ಸಿ/ಎಸ್ಟಿ ಕಾಯ್ದೆ ಅಡಿ ಮತ್ತು ಕುಲಶಾಸ್ತ್ರ ಅಧ್ಯಯನಯದಪ್ರಕಾರತಳವಾರಜಾತಿಯನ್ನು ಮಸೂದೆಮಂಡನೆಮೂಲಕಪರಿಶಿಷ್ಟಪಂಗಡದ ಪಟ್ಟಿಗೆ ಸೇರ್ಪಡೆಯಾಗಿದೆ. ಕರ್ನಾಟಕ ಗೆಜೆಟ್ ಸುತ್ತೋಲೆ ಹೊರಡಿಸಿದೆ. ಕರ್ನಾಟಕ ಸರಕಾರದ ಗೆಜೆಟ್ ಮತ್ತು ಸುತ್ತೋಲೆಗಳನ್ನು ಕೂಲುಂಕುಷವಾಗಿ ಪರಿಶೀಲಿಸಿದ ನಂತರ ಕರ್ನಾಟಕದ ತಳವಾರ ಜಾತಿಯವರಿಗೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣಪತ್ರಗಳನ್ನು ಎಲ್ಲ ಜಿಲ್ಲೆಗಳಲ್ಲಿ ನೀಡಲಾಗುತ್ತಿದೆ. ಯಾವದೇ ಜಾತಿ ಪ್ರಮಾಣ ಪತ್ರಗಳನ್ನು ಕೊಡುವಾಗ ನಿಯಮಾನುಸಾರವಾಗಿ ವಿವಿಧ ಹಂತಗಳಲ್ಲಿ ಪರಿಶೀಲನೆ ಮಾಡಿ ಹಕ್ಕುದಾರನಿಗೆ ವಿತರಿಸುತ್ತಿರುವದು ಸಂವಿಧಾನದ ಪದ್ಧತಿಯಾಗಿದೆ. ಅದರ ಅಡಿಯಲ್ಲಿ ತಳವಾರ ಜಾತಿಯವರು ಪ್ರಮಾಣ ಪತ್ರ ಪಡೆದುಕೊಂಡು ಸಾಮಾಜಿಕನ್ಯಾಯದ ಅಡಿಯಲ್ಲಿ ಸರಕಾರದ ಸೌಲಭ್ಯಗಳಾದ ನೌಕರಿ, ಸಿಂಧುತ್ವ, ಶಾಲೆ ಕಾಲೇಜುಗಳಪ್ರವೇಶ,ಸಾಮಾಜಿಕ,ರಾಜಕೀಯ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದೆ ಎಂದರು.

ಹೈಕೋರ್ಟದಲ್ಲಿ ಸಾರ್ವಜನಿಕ ಹಿತಾ ಸಕ್ತಿ ಅರ್ಜಿಯಲ್ಲಿ ಎಲ್ಲಿಯೂ ಕೂಡಾ ನಿಜವಾದ ತಳವಾರ ಜಾತಿಯವರ ವಿರುದ್ಧ ನಕರಾತ್ಮಕ ಅಂಶಗಳು ಕಂಡು ಬರುವದಿಲ್ಲ. ಭಾರತ ಸರಕಾರದ ಗೆಜೆಟ್ ನೋಟಿಫಿಕೇಶನ್ ಮತ್ತು ಕರ್ನಾಟಕ ಸರಕಾರದ ಸುತ್ತೋಲೆಗಳನ್ನು ಆಧರಿಸಿ ನಿಜವಾದ ತಳವಾರರಿಗೆ ಪರಿಶಿಷ್ಟ ಪಂಗಡ ಪ್ರಮಾಣ ಪತ್ರ ವಿತರಿಸುವ ಯಥಾಸ್ಥಿತಿಯನ್ನು ಕಾಪಾಡಬೇಕು ಎಂದರು.

ರಾಜ್ಯ ತಳವಾರ ಮಹಾಸಭಾ ತಾಲೂಕಾ ಘಟಕ ಅಧ್ಯಕ್ಷ ಸಂಗಮೇಶ ನಾಗನೂರ, ರಾಜ್ಯ ತಳವಾರ ನೌಕರರ ಮಹಾಸಭಾ ಜಿಲ್ಲಾಧ್ಯಕ್ಷ ಸಿದ್ರಾಮೇಶ ಮೀಶಿ, ರಾಜ್ಯ ತಳವಾರ ಮಹಾಸಭಾ ಜಿಲ್ಲಾ ಖಜಾಂಚಿ ಕೃಷ್ಣಾ ತಳವಾರ, ಮಾದೇವ ಕೋಳಿ, ಬಸಪ್ಪ ಕೋಳಿ, ನಂದೆಪ್ಪ ತಳವಾರ, ವಯಾನಂದ ಹುಲ್ಲನ್ನವರ, ಅಪ್ಪಸಿ ದಳವಾಯಿ, ಕಾಶೀನಾಥ ಕಂಕಣವಾಡಿ, ಪರತು ಗೋತೆ., ಲಕ್ಕಪ್ಪ ದಳವಾಯಿ, ಮಹಾದೇವ ತಳವಾರ, ರಮೇಶ ಗಡ್ಡಿ, ರಾಮು ಚಿಪ್ಪಲಕಟ್ಟಿ, ಕುಪೇಂದ್ರ ಐಗಳಿ, ತಮ್ಮಣ್ಣ ಶಿರಬೂರ ಸಹಿತ ಹಲವರು ಇದ್ದರು.

# ಜಿಲ್ಲಾಮಟ್ಟದ ರಸಪ್ರಶ್ನೆಯಲ್ಲಿ ಬನಹಟ್ಟಿಯ ಶಾಲೆ ಪ್ರಥಮ

**ಜಮಖಂಡಿ :** ಕರ್ನಾಟಕ ಸರ್ಕಾರ ಮತ್ತು ರಾಜ್ಯ ಏಡ್ಸ್ ಪ್ರಿವೆನ್ ಷನ್ ಸೊಸೈಟಿ ಬೆಂಗಳೂರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಮಾಂದಕ ಹಾಗೂ ನಿಯಂತ್ರಣ ಘಟಕ ಬಾಗಲಕೋಟೆ ಹಾಗೂ ಸರಕಾರಿ ಬಾಲಕಿಯರ ಪ್ರೌಢಶಾಲೆ ಜಮಖಂಡಿ ಇದರ ಆಶ್ರಯದಲ್ಲಿ ಯುವಜನೋತ್ಸವ 2024ರ ಜಿಲ್ಲಾಮಟ್ಟದ ರಸಪ್ರಶ್ನೆ ಸ್ಪರ್ಧೆ ನಡೆಯಿತು.



ಆರೋಗ್ಯ ಹದಿಹರೆದ ಆರೋಗ್ಯಕರ ಆಹಾರ ಮತ್ತು ಹೆಚ್.ಐ.ವಿ.

ಮತ್ತು ಏಡ್ಸ್ ಕುರಿತು ಮೂಲ ಮಾಹಿತಿ ಮತ್ತು ಸೇವೆಗಳು ಸ್ವಯಂ ಪ್ರೇರಿತ ರಕ್ತದಾನ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದ ಆರೋಗ್ಯ ಕಾರ್ಯಕ್ರಮಗಳು ಕುರಿತು ಜಮಖಂಡಿ, ಮುಧೋಳ, ಬೀಳಗಿ ತಾಲೂಕುಗಳ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ 36 ಪ್ರೌಢಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು

ಸ್ಪರ್ಧೆಯಲ್ಲಿ ಬನಹಟ್ಟಿಯ ಎಸ್.ಆರ್.ಎ ಪ್ರೌಢಶಾಲೆ ಪ್ರಥಮ ಸ್ಥಾನ, ಮಹಾಲಿಂಗಪುರದ ಸರ್ಕಾರಿ ಪ್ರೌಢಶಾಲೆ ದ್ವಿತೀಯ ಸ್ಥಾನ, ಜಮಖಂಡಿ ತಾಲೂಕಿನ ಆಲಬಾಳದ ಸರ್ಕಾರಿ ಪ್ರೌಢಶಾಲೆ ತೃತೀಯ ಸ್ಥಾನ ಪಡೆದುಕೊಂಡಿತು. ಮದಬಾವಿಯ ಸರ್ಕಾರಿ ಪ್ರೌಢಶಾಲೆ ಮತ್ತು ಆಲಗೂರ ಸರ್ಕಾರಿ ಪ್ರೌಢಶಾಲೆ ಸಮಾಧಾನಕರ ಬಹುಮಾನ ಪಡೆಯಿತು.

ಗೆಲವು ಸಾಧಿಸಿದ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಮತ್ತು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಯಿತು

ಇದೇ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿ ಮಹಾಂತೇಶ ಚೌಹಾಣ,

ಪ್ರವೀಣ ಶಿರುಗುಪ್ಪಿ, ಎಂ.ಹೆಚ್.ಸುಬೇದಾರ ಸಹಿತ ಹಲವರು ಇದ್ದರು.

# ವಿದ್ಯಾಭ್ಯಾಸ ಸಾಲ ಸೌಲಭ್ಯಕ್ಕಾಗಿ ಅರ್ಜಿ

**ಬಾಗಲಕೋಟೆ :** ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಪ್ರಸಕ್ತ ಸಾಲಿಗೆ ಅರಿವು ಸಾಲ ಯೋಜನೆಯಡಿ ವಿದ್ಯಾಬ್ಯಾಸ ಸಾಲಕ್ಕಾಗಿ ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರೈಸ್ತರು, ಜೈನರು, ಭೌದ್ದ ಧರ್ಮಿಯರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ, ಡಿ-ಸಿಇಟಿ, ಪಿಜಿ-ಸಿಇಟಿ, ಎನ್‌ಇಇಟಿ ಮೂಲಕ ಪದವಿ ಮತ್ತು ಸ್ನಾತಕೋತ್ತರ ಕೋರ್ಸಗಳಾದ ವೈದ್ಯಕೀಯ, ದಂತವೈದ್ಯಕೀಯ, ಆಯುಷ, ಇಂಜಿನೀಯರಿಂಗ್ & ಟೆಕ್ನಾಲಜಿ ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್‌ಗಳಲ್ಲಿ ಆಯ್ಕೆಯಾಗಿರುವಂತಹ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತದೆ. ಅರ್ಜಿ ಸಲ್ಲಿಸುವಾಗ ಹಿಂದಿನ ವರ್ಷದಲ್ಲಿ ಪಡೆದಿರುವ ಸಾಲದ ಮೊತ್ತ ಶೇ.12 ರಷ್ಟನ್ನು ಪಾವತಿಸಬೇಕಾಗಿರುತ್ತದೆ. ಅರ್ಜಿಯನ್ನು ವೆಬ್‌ಸೈಟ್ ನಲ್ಲಿ ಅಕ್ಟೋಬರ 31 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ, ದೂಸಂ.08354-236255 ಇವರನ್ನು ಸಂಪರ್ಕಿಸಬಹುದಾಗಿದೆ.

# ಸರಕಾರಿ ನೌಕರರ ಪತ್ತಿನ ಸಂಘದ ಸರ್ವ ಸಾಧಾರಣಾ ಸಭೆ

**ಬಾಗಲಕೋಟೆ :** ಬಾಗಲಕೋಟೆ ಜಿಲ್ಲಾ ರಾಜ್ಯ ಸರಕಾರಿ ನೌಕರರ ಪತ್ತಿನ ಸಹಕಾರಿ ಸಂಘದ 48ನೇ ವಾರ್ಷಿಕ ಸರ್ವ ಸಾಧಾರಣ ಸಭೆಯು ಇದೇ ಸೆಪ್ಟೆಂಬರ 20 ರಂದು ಸಂಜೆ 5 ಗಂಟೆಗೆ ಸಂಘದ ಕಾರ್ಯಾಲಯ ಸೆಕ್ಟರ ನಂ.21 ಪ್ಲಾಟ ನಂ.ಸಿ 82 ನವನಗರ, ಬಾಗಲಕೋಟೆಯಲ್ಲಿ ಜರುಗಲಿದೆ. ಅಲ್ಲದೇ 2023-24ನೇ ಸಾಲಿಗೆ ಸಂಘದ ಸದಸ್ಯರ ಮಕ್ಕಳಿಗೆ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಹಾಗೂ ಅಂತಿಮ ಪದವಿಯಲ್ಲಿ ಪಾಸಾದ ಶೇ.80 ರಷ್ಟು ಅಂಕ ಪಡೆದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಪುರಸ್ಕಾರಕ್ಕೆ ಸೆಪ್ಟೆಂಬರ 15 ರೊಳಗಾಗಿ ಸಂಘಕ್ಕೆ ಅರ್ಜಿ ಸಲ್ಲಿಸುವಂತೆ ಸಂಘದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಮ್ ಸ್ಥಾಪನೆಗಾಗಿ ಅರ್ಜಿ

**ಬಾಗಲಕೋಟೆ :** ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ಪಡೆದ ಪರಿಶಿಷ್ಟ ಜಾತಿ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಹೊಂದಲು ಜಿಮ್ ಸ್ಥಾಪನೆಗಾಗಿ ಸಹಾಯಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಕ್ರೀಡಾಪಟುಗಳು ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಾಗಲಕೋಟೆ ಇವರಲ್ಲಿ ಅರ್ಜಿ ನಮೂನೆ ಪಡೆದುಕೊಂಡು ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಯೊಂದಿಗೆ ಸೆಪ್ಟೆಂಬರ 24ರ ಸಂಜೆ 4ರೊಳಗಾಗಿ ಸಲ್ಲಿಸುವಂತೆ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354-235896, 9739722700, 9945284771ಗೆ ಸಂಪರ್ಕಿಸಬಹುದಾಗಿದೆ.

# ವಿಶ್ವ ಸಂಸ್ಕೃತಿಯೊಳಗೆ ಹಾಸುಹೊಕ್ಕಾಗಿರುವ ಗಣೇಶ ಆರಾಧನೆ

**ಈಗ** ಹಬ್ಬಗಳ ಸಾಲು ಶುರು. ಜಡತೆಯಿಂದ ಚೈತನ್ಯದೆಡೆಗೆ ಕರೆದೊಯ್ಯುವ ಹಬ್ಬಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿವೆ. ಗಣಪತಿಯು ವಿದ್ಯೆ, ಬುದ್ಧಿ ಮತ್ತು ವಿವೇಕಗಳ ದೇವತೆ. ಭಾರತದ ತುಂಬೆಲ್ಲ ಗಣಪತಿಯನ್ನು ಪೂಜಿಸುತ್ತಾರೆ. ಗಣೇಶನ ಆರಾಧನೆ ಕಾಲಾತೀತ, ದೇಶಾತೀತ. ವಸಾಹತುಶಾಹಿಯ ವಿರುದ್ಧ ಸಾಂಸ್ಕೃತಿಕ ಜಾಗೃತಿ ಮೂಡಿಸುವ ಆಚರಣೆಯ ಮೂಲಕ ಗಣೇಶ ಉತ್ಸವವು ಸಾರ್ವಜನಿಕ ಹಬ್ಬವಾಗಿ ಚಾಲನೆಯಲ್ಲಿ ಬಂದಿತು. . ನೆರೆಯ ಮಹಾರಾಷ್ಟ್ರದಲ್ಲಿ ಗಣೇಶೋತ್ಸವ ಸಾರ್ವಜನಿಕವಾಗಿ ಆರಂಭವಾಯಿತು. ಗಣೇಶ ಇಂದು ವಿಶ್ವ ಮಾನ್ಯ ದೇವತೆ. ನಮ್ಮ ದೇಶದಲ್ಲಷ್ಟೇ ಅಲ್ಲದೆ ಚೀನಾ, ಜಪಾನ್, ಮಲೇಶೀಯಾ, ಜಾವಾ, ಟಿಬೇಟ್ ಮೊದಲಾದ ರಾಷ್ಟ್ರಗಳಲ್ಲಿಯೂ ಗಣೇಶನಿಗೆ ಅಗ್ರ ಸ್ಥಾನವಿತ್ತೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಬೌದ್ಧ ಧರ್ಮದ ಚಾರಿತ್ರಿಕ ಸ್ತೂಪಗಳಲ್ಲಿ ವಿನಾಯಕನ ಚಿಹ್ನೆಗಳಿರುವ ನಿದರ್ಶನಗಳಿರುವುದು ಬಾಂಗ್ಲಾದಲ್ಲಿವೆ. ಗಾಂಧಾರ, ಮಥುರ, ಅಮರಾವತಿ, ಸಾರಾನಾಥ, ಟಿಬೆಟ್ ಮೊದಲಾದೆಡೆಗಳಲ್ಲಿಯೂ ಈ ದೇವತೆಯ ಕಲಾಕೃತಿಗಳನ್ನು ಕಾಣುತ್ತೇವೆ.



**ತಿಲಕರ ಕಾಲಕ್ಕೆ ರಾಷ್ಟ್ರೀಯ ಸ್ವರೂಪ**

ಬಾದಾಮಿಯ ಚಾಲುಕ್ಯರ ಕಾಲದ ವಾತಾಪಿ ಭಜೆಉಕ್ತಿಕರ್ನಾಟಕಸಂಗೀತದಆದ್ಯವೆನಿಸಿದೆ. 11ನೇ ಶತಮಾನದಲ್ಲಿ ಗುಜರಾತ್‌ನಲ್ಲಿದ್ದ ಗಣೇಶ ವಿಗ್ರಹ ಈಗ ಲಂಡನ್ನಿನ ವಿಕ್ಟೋರಿಯಾ ಆಂಡ್ ಅಲ್ಬರ್ಟ್ ವಸ್ತುಸಂಗ್ರಹಾಲಯದಲ್ಲಿದೆ. ಭರ್ಮಾ, ಥೈಲ್ಯಾಂಡ, ಮಲೇಶಿಯಾ, ಕಾಂಬೋಡಿಯಾ, ವಿಯೆಟ್ನಾಂ, ಇಂ-ಡೋನೇಷ್ಯಾ ಮೊದಲಾದ ಆಗ್ನೇಯ ಏಷಿಯಾಗಳಲ್ಲಿಯೂ ಗಣೇಶನ ಆರಾಧನೆಯ ಸಂಕೇತಗಳಾಗಿ ಕೆಲವು ಕಲಾಕೃತಿಗಳನ್ನು ಕಾಣುತ್ತೇವೆ. ಜಪಾನಿನಲ್ಲಿ ಸಾಹಿತ್ಯ, ಚಿತ್ರ, ಶಿಲ್ಪಕಲಾಕ್ಷೇತ್ರಗಳಲ್ಲಿಯೂ ಭಾರತೀಯ ಶೈಲಿಯ ಗಣೇಶನ ಬಿಂಬಗಳಿವೆ. ಒಟ್ಟಾರೆ ವಿಶ್ವ ಸಂಸ್ಕೃತಿಯೊಳಗೆ ಗಣೇಶನ ಆರಾಧನೆ ಹಾಸುಹೊಕ್ಕಾಗಿರುವುದು ಹಿರಿಮೆಯ ಸಂಕೇತವಾಗಿದೆ. ವೇದಗಳಲ್ಲಿಯೂ ಗಣಪತಿ ಪೂಜೆಯ ನಿರೂಪಣೆ ಇದೆ. ಉಪನಿಷತ್ತುಗಳ ಕಾಲದಲ್ಲಿಯೂ ಗಣಪತಿ ಪೂಜೆ ಹೆಚ್ಚು ಮಹತ್ವ ಪಡೆಯಿತು. ಈಚೆಗೆ ತಿಲಕರ ಕಾಲದಲ್ಲಿ ಈ ಪೂಜೆಗೆ ರಾಷ್ಟ್ರೀಯ ಸ್ವರೂಪ ಬಂದಿತು. ಜನಪದರಂತೂ ತಮ್ಮ ಕಾವ್ಯ, ಆಟ, ಬಯಲಾಟಗಳಲ್ಲಿ ಮೊದಲಿಗೆ ಗಣಪತಿಯನ್ನು ನೆನೆಯುತ್ತಾರೆ.

**ನೂರೆಂಟು ನಾಮ**

ಗಣೇಶ ಎಲ್ಲ ದೇವತೆಗಳಿಗೂ ಒಡೆಯ. ಅಗ್ರ ದೇವತೆ. ವಿದ್ಯಾಭ್ಯಾಸ, ವಿವಾಹ, ಉಪನಯನ, ಗೃಹಪ್ರವೇಶ, ದೇವತಾಕಾರ್ಯ ಮೊದಲಾದ ಜೀವನದ ಪ್ರತಿಯೊಂದು ಶುಭ ಕಾರ್ಯಗಳಲ್ಲಿಯೂ ನಿರ್ವಿಘ್ನತೆಯ ಸಿದ್ಧಿಗಾಗಿ ಗಣಪತಿಯನ್ನು ಪೂಜಿಸುವ ಸಂಪ್ರದಾಯವಿದೆ. ಗಣಪತಿಗಿರುವ ಒಂದೊಂದು ಹೆಸರೂ ಒಂದೊಂದು ಗುಣಲಕ್ಷಣ ಸೂಚಿಸುತ್ತದೆ. ಸುಮುಖ, ಪಂಚಾಸ್ಯ, ಗಜಾಸ್ಯ, ಧೀರ, ವೀರ, ಕಂದರ್ಪ, ಶಕ್ತಿ, ಆಮೋದ, ಪ್ರಮಥ, ರುದ್ರ, ವಿದ್ಯಾ, ವಿಘ್ನಹರ, ದುರಿತಹರ, ಭಕ್ತವತ್ಸಲ, ಕಾವಿತಾಥ-ರ್ಗ, ಸಮೋಹನ ಹೀಗೆ ನಾನಾ ದೇವತೆಯ ಅವತಾರ ಕಲ್ಪನೆಗಳು, ಮಂತ್ರಗಳು, ಮಂತ್ರ ಶಾಸ್ತ್ರದಲ್ಲಿ ಹಾಗೂ ಗಣೇಶ ಪುರಾಣಗಳಲ್ಲಿ ವಿಫುಲವಾಗಿ ಸಿಕ್ಕುತ್ತವೆ.

**ಕೃಷಿಕರ ಪಿಳ್ಳಪ್ಪ**

ಆರ್ಯರು ತಮ್ಮ ವೈದಿಕ ದೇವತೆಗಳ ಗುಣಗಳನ್ನು, ದ್ರಾವಿಡರು ಶಿವಾಚಾರದ ಸೂಚನೆಗಳನ್ನು ಈ ಮಾಸನ ಪುತ್ರನಲ್ಲಿ ಸೇರಿಸಿ ಓಂಕಾರ ಸ್ವರೂಪಿಯನ್ನಾಗಿ ಮಾಡಿ ಎಲ್ಲ ಮಂಗಲ ಕಾರ್ಯಗಳ ಆರಂಭ ಪೂಜೆಯನ್ನು ಸಲ್ಲಿಸುವ ಗೌರವವನ್ನು ಗಣಪತಿಗೆ ಕೊಟ್ಟರು. ಮುಂದೆ ಆರ್ಯ ದ್ರಾವಿಡರ ಸಂಂ-ಯೋಗವಾಗಲು ಅವರ ಸಂಸ್ಕೃತಿಯು ಒಂದಾಗಿ ಈ ಭಾರತದ ಸಂಸ್ಕೃತಿಯೆಂದು ಉಳಿದಿದೆ. ವಿದ್ಯಾಲಾಭ, ಧನಲಾಭ, ಸಕಲ ಇಷ್ಟಾರ್ಥ ಲಾಭಗಳು ಗಣಪತಿಯನ್ನು ಪೂಜಿಸುವುದ-ರಿಂದ ದೊರೆಯುತ್ತವೆ ಎಂಬ ನಂಬುಗೆ ಜನಪದರಲ್ಲಿದೆ. ನಿರ್ವಿಘ್ನತೆಗೆ ಸಂಕೇತವಾಗಿ ಜನಪದರು ರೂಪಿಸಿಕೊಂಡ ದೈವ ಗಣೇಶ. ಹಿಡಿಗಾತ್ರದ ತೊಪ್ಪೆ ಸಗಣೆ ಉಂಡಿ ಮಾಡಿ ಅದರ ನೆತ್ತಿಯ ಮೇಲೆ ನಾಲ್ಕಾರು ಗ-ರಿಕೆಗಳನ್ನು ಸಿಕ್ಕಿಸುತ್ತಾರೆ. ಅದೇ ಗಣೇಶ. ಅದನ್ನು ಜನಪದರು ಪಿಳ್ಳಪ್ಪ ಗೊಂಬೇವರು, ಬೆನಕ ಮುಂತಾದ ಹೆಸರುಗಳಿಂದ ಸಂಬೋಧಿಸುತ್ತಾರೆ. ಪ್ರತಿಯೊಂದು ಶುಭ ಕಾರ್ಯದ ಪ್ರಾರಂಭದಲ್ಲಿಯೂ ಈ ಪಿಳ್ಳಪ್ಪನನ್ನು ಮಾಡಿ ಮೊದಲು ಪೂಜೆ ಸಲ್ಲಿಸಿ ಮುಂದಿನ ಕಾರ್ಯಗಳಲ್ಲಿ ತೊಡಗುತ್ತಾರೆ. ಬೇಸಾಯದ ಸಂದರ್ಭಗಳಲ್ಲಿಯೂ ಇದರ ಬಳಕೆಯಿದೆ. ಕಣದ ನಡುವೆ ನೆಟ್ಟ ಮೇಟಿಯ ನೆತ್ತಿಯ ಮೇಲೆ ಇಟ್ಟ ಪಿಳ್ಳಪ್ಪ ಕಣದ ಕೆಲಸಗಳೆಲ್ಲ ಮುಗಿಯುವವರೆಗೂ ಇರುತ್ತದೆ.

**ಹಾಸ್ಯಕ್ಕೆ ಅಧಿಪತಿ**

ಗಣೇಶನ ಮೂರ್ತಿ ಕಲ್ಪನೆಯು ಬಹಳ ವಿಶಿಷ್ಟ ಮತ್ತು ವಿಶೇಷವಾದುದಾಗಿದೆ. ಮಾನವ ದೇಹ ಆನೆಯ ಗಾತ್ರ , ಆನೆಯ ಮುಖ , ಸೊಂಡಿಲು, ಒಂದು ಮುರಿದ ಕೋರೆ, ಡೊಳ್ಳು ಹೊಟ್ಟೆ, ಹೊಟ್ಟೆಗೆ ಬಿಗಿದು ಕಟ್ಟಿದ ಹಾವು, ಓರೆ ನೋಟ, ಚಿಕ್ಕ ಚಿಕ್ಕ ಕಾಲುಗಳು, ನಾಲ್ಕು ಕೈಗಳು, ಮೂಷಿಕ ವಾಹನ ಇದು ಗಣೇಶನ ಮೂರ್ತಿಯ ಕಲ್ಪನೆ. ವಿಘ್ನ ವಿನಾಶಕ ಮಂಗಲ ಮೂರ್ತಿ, ವಿದ್ಯಾ ದೇವತೆ, ಸಾಹಿತ್ಯ, ಸಂಗೀತ, ನೃತ್ಯ, ಭಾಷಣಗಳ ಪ್ರೇಮಿ ಎಂಬ ನಂಬಿಕೆ ಈ ದೇವತೆ ಮೇಲಿದೆ. ನವರಸಗಳಲ್ಲೊಂದಾದ ಹಾಸ್ಯಕ್ಕೆ ಗಣಪತಿಯು ಅಧಿಪತಿ. ಹಾಸ್ಯವನ್ನು ಬಿಳಿಬಣ್ಣಕ್ಕೆ ಹೋಲಿಸಲಾಗಿದೆ. ಕಟಕಿಯಿಲ್ಲದೆ ನಗೆ ಶುಭ್ರವಾಗಿ ಹಸನಾಗಿರುತ್ತದೆ. ಗಣೇಶನಿಗೆ ಪ್ರಿಯವಾದ ಬಣ್ಣ ಶ್ವೇತ. ಹಾಸ್ಯದ ಆತ್ಮಸ್ಥ, ಪರಸ್ಥ ಎಂಬ ಎರಡು ಬೇಧಗಳಲ್ಲಿ ಆತ್ಮಸ್ಥ ಹಾಸ್ಯವು ಗಣಪತಿಯದು ಎಂದರೆ ತನ್ನನ್ನೇ ನಗುವಿನವಸ್ತುವನ್ನಾಗಿಸಿಕೊಳ್ಳುವ ಔದಾರ್ಯ ಹೊಂದಿದ ವಿಶಾಲದೃಷ್ಟಿಯ ಸರಸ ಹಾಸ್ಯ ಈ ದೇವತೆಯದು. ಜನಪದ ಕಾವ್ಯ ಮತ್ತು ಪುರಾಣ ಕಥೆಗಳಲ್ಲಿ ಗಣಪತಿಗೆ ಸಂಬಂಧ ಪಟ್ಟ ಅನೇಕ ಕಥೆಗಳು, ದಂತಕಥೆಗಳಿವೆ. ಗಣೇಶನ ಜನನ, ತುಂಟತನ, ಬುದ್ಧಿಚಾತುರ್ಯ ಇತ್ಯಾದಿ ಕುರಿತ ಕಥೆಗಳು ಪ್ರಚಲಿತದಲ್ಲಿವೆ.

**ಗಜವದನ**

ಒಮ್ಮೆ ಪಾರ್ವತಿ ಸ್ನಾನದ ಮನೆಗೆ ಹೋದಾಗ ಯಾರಾದರೂ ಒಳನುಗ್ಗಿದರೆ ಗತಿಯೇನೆಂದು ಒಳನುಗ್ಗದಂತೆ ತನ್ನ ಮೈ ತಿಕ್ಕಿ ಅದರಿಂದ





ಉಂಟಾದ ಮಣ್ಣಿನ ಕೊಳೆಯಿಂದ ಬಾಲಕನ ಮೂರ್ತಿ ಮಾಡಿ ಅದಕ್ಕೆ ಜೀವ ತುಂಬಿ ಕಾಯಲು ನಿಲ್ಲಿಸಿದಳು. ಯಾರನ್ನೂ ಒಳಗೆ ಬಿಡಕೂಡದೆಂದು ಆ ಹುಡುಗನಿಗೆ ಕಟ್ಟಪ್ಪನೆ ಮಾಡಿ ಸ್ನಾನಕ್ಕೆ ಹೋದಳು. ಇತ್ತ ದೇಶ ಸಂಚಾರಕ್ಕೆ ಹೋದ ಶಿವ ಆ ಹುಡುಗನ ತಲೆಯನ್ನೇ ಕತ್ತರಿಸಿದ. ತನ್ನ ಮಗನಿಗಾದ ಗತಿಗೆ ಪಾರ್ವತಿ ಸಂಕಟಪಟ್ಟಳು. ಅತ್ತಳು, ಕರೆದಳು ಶಿವನಿಗೆ ಕರುಣೆ ಬಂದು ಅವಳನ್ನು ಸಮಾಧಾನಪಡಿಸಲು ಹುಡುಗನ ತಲೆ ಬರಿಸುವುದಾಗಿ ಭರವಸೆ ಕೊಡುತ್ತಾನೆ. ಉತ್ತರ ದಿಕ್ಕಿಗೆ ತಲೆ ಮಾಡಿ ಮಲಗಿದವರ ತಲೆ ಕತ್ತರಿಸಿ ತನ್ನಿ ಎಂದು ತನ್ನ ಸೇವಕರಿಗೆ ಶಿವ ಆಜ್ಞಾಪಿಸುತ್ತಾನೆ. ಆನೆಯ ಮರಿಯ ತಲೆಯನ್ನೇ ಕಡಿದು ತಂದು ಸೇವಕರು ಶಿವನಿಗೆ ಒಪ್ಪಿಸಿದರು. ಶಿವ ಹುಡುಗನ ಮುಂಡಕ್ಕೆ ರುಂಡವನ್ನು ಕಸಿ ಮಾಡಿ ಜೀವ ತುಂಬಿದ. ಆನೆಯ ತಲೆಯನ್ನು ಧರಿಸಿದ ದೇವತೆಯೇ ಗಜವದನಾದ.

**ಏಕದಂತ**

ಭೋಜನ ಪ್ರಿಯನಾದ ಗಣೇಶ ಒಂದು ದಿನ ಭಕ್ತರ ಮನೆ ಮನೆಗೆ ತಿರುಗಾಡಿ ರುಚಿರುಚಿಂ-ಯಾದ ಕಡಬು, ಕರಿಗಡಬು, ಕಾಯಿಗಡಬು, ಉದ್ದಿನಕಡಬು ಮೊದಲಾದವನ್ನು ಹೊಟ್ಟೆಬಿಗಿಯುವವರೆಗೆ ಸೇವಿಸಿ, ಇಲಿಯ ಮೇಲೆ ಹತ್ತಿ ನಡೆದಿದ್ದನಂತೆ. ಈತನ ಭಾರ ತಾಳದೆಮೂಷಿಕಕಲ್ಲಿಗೆಎಡವಿಬಿದ್ದಿತು.ಗಣೇಶ ಕೆಳಗೆ ಬಿದ್ದ ಹೊಟ್ಟೆ ಹರಿದು ತಿಂದ ತಿಂಡಿಂ-ಮೆಲ್ಲ ನದಿಯ ಪಾಲಾಯಿತು. ಯಾರಾದರೂ ನೋಡಿಯಾರೆಂದು ಅತ್ತ ಇತ್ತ ನೋಡುತ್ತ, ಬಿದ್ದುದನ್ನುಮತ್ತೆಹೊಟ್ಟೆಯಲ್ಲಿಹಾಕಿಕೊಂಡು, ಅಲ್ಲಿಯೇ ಹರಿದು ಹೋಗುತ್ತಿದ್ದ ಹಾವನ್ನು ಹೊಟ್ಟೆಗೆ ಗಟ್ಟಿಯಾಗಿ ಕಟ್ಟಿಕೊಂಡನಂತೆ. ಇವನ ಈ ನಗೆಪಾಟಲು ದೃಶ್ಯವನ್ನು ಕಂಡು ಆಕಾಶದಲ್ಲಿ ಚಂದ್ರ ಗಹಗಹಿಸಿ ನಕ್ಕ. ಬಿದ್ದವನ ಬಗ್ಗೆ ಕನಿಕರ ಪಡದೇ ಬಿದ್ದ ಪೆಟ್ಟಿಗಿಂತ ನಕ್ಕ ಪೆಟ್ಟು ಹೆಚ್ಚು. ಗಣೇಶನಿಗೆ ಅಸಹ್ಯವೆನಿಸಿ, ಕೋಪವುಂಟಾಗಿ ಪ್ರತಿ ಭಾದ್ರಪದ ಚೌತಿಯ ದಿನ ನನ್ನನ್ನು ನೋಡದೆ ಯಾರೂ ನಿನ್ನನ್ನು ನೋಡಬಾರದು ಹಾಗೇನಾದರೂ ತಪ್ಪಿ ನಿನ್ನನ್ನು ಮೊದಲು ನೋಡಿದರೆ ಅವರ ಮೇಲೆ ಆಪಾದನೆ ಬರಲಿ ಎಂದು ಚಂದ್ರನಿಗೆ ಶಾಪವನ್ನಿತ್ತ. ತನ್ನನ್ನು ನೋಡಿ ನೋಯಿಸಿ ಗೇಲಿ ಮಾಡಿದ ಚಂದ್ರನಿಗೆ ತನ್ನ ಒಂದು ದಂತವನ್ನು ಸಿಟ್ಟಿನ ಭರದಲ್ಲಿ ಎಸೆದನಂತೆ. ಆಗಿನಿಂದ ಏಕದಂತನಾದ. ಇಂಥ ಅನೇಕ ಕಥೆಗಳ ಮೂಲಕ ಜನಸಮಾನ್ಯರ ಬದುಕಿನಲ್ಲಿ ಬೆರೆತು ಹೋಗಿರುವ ಗಣೇಶ ಜಗದಗಲ ಆರಾಧನೆಯ ಶಕ್ತಿ ದೇವತೆಯಾಗಿದ್ದಾನೆ.

* * *

**ವಿಳಾಸ : ಡಾ. ಪ್ರಕಾಶ ಗ.ಖಾಡೆ**
**ಮನೆ ನಂ. ಎಸ್.135, ಸೆಕ್ಟರ್ ನಂ.63,**
**ನವನಗರ,ಬಾಗಲಕೋಟ.-587103.**
**ಮೊ.9845500890**

# ಪೌಷ್ಠಿಕ ಆಹಾರ ದಿನಾಚರಣೆ



**ಬ್ಯಾಡಗಿ :** ಸರ್ಕಾರಗಳು ಜಾರಿಗೊಳಿಸಿರುವ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಕೇವಲ ಸಂಬಂಧಿಸಿದ ಇಲಾಖೆಗೆ ಮಾತ್ರ ಸೀಮಿತವಲ್ಲ, ಅದು ಪ್ರತಿಯೊಂದು ಇಲಾಖೆಯ ಜವಾಬ್ದಾರಿಯೂ ಸಹ ಆಗಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶರಾದ ಅಮೂಲ್ ಜೆ ಹಿರೇಕುಡಿ ಅಭಿಪ್ರಾಯಪಟ್ಟರು.

ಪಟ್ಟಣದ ತಾಲೂಕ ಪಂಚಾಯಿತಿ ಸಭಾಭವನದಲ್ಲಿ ತಾಲೂಕ ಕಾನೂನು ಸೇವೆಗಳ ಸಮಿತಿ, ನ್ಯಾಯಾಧೀಗಳ ಸಂಘ ಹಾಗೂ ಶಿಶು ಅಭಿವೃದ್ಧಿ ಯೋಜನೆ ಇಲಾಖೆ ಮತ್ತು ಆರೋಗ್ಯ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪೌಷ್ಟಿಕ ಆಹಾರ ದಿನಾಚರಣೆ ಹಾಗೂ ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪೌಷ್ಟಿಕತೆ ಎನ್ನುವುದು ಪ್ರಾಪ್ತ ವಯಸ್ಸಿನವರಿಗೆ ಮಾತ್ರವಲ್ಲದೆ, ಪ್ರಸವಪೂರ್ವ ಮಗುವಿಗೂ ಅವಶ್ಯ, ಅದಕ್ಕಾಗಿ ಸರ್ಕಾರದ ಯೋಜನೆಗಳನ್ನು ಸಮಾಜಕ್ಕೆ ಹತ್ತಿರವಾಗಿರುವ ಅಂಗನವಾಡಿ ಕೇಂದ್ರಗಳ ಮೂಲಕ ತಲುಪಿಸಲಾಗುತ್ತದೆ, ಎಲ್ಲ ಇಲಾಖೆಗಳು ಕೈಜೋಡಿಸಿದಾಗ ಪೌಷ್ಟಿಕತೆ ಬೆಂಬಲಿಸುವ, ಆರೋಗ್ಯ ಪೊ?ಷಿಸುವ ಕೆಲಸವಾಗುತ್ತದೆ ಎಂದರು.

ಸಿಡಿಪಿಓ ವೈ.ಟಿ.ಪೂಜಾರ ಮಾತನಾಡಿ, ಅಪೌಷ್ಟಿಕತೆಯಿಂದಾಗಿ ಹಲವು ಅನಾರೋಗ್ಯದ ಸಮಸ್ಯೆಗಳು ಉದ್ಭವಿಸಿ, ವಯಸ್ಸು ಹಾಗೂ ಲಿಂಗ ಭೇದವಿಲ್ಲದೆ, ಎಲ್ಲರೂ ಸಂಕಷ್ಟಕ್ಕೆ ಒಳಗಾಗುತ್ತಾರೆ, ಗರ್ಭಿಣಿಯ ಪೌಷ್ಟಿಕ ಮಟ್ಟದ ಆಹಾರ ಸೇವನೆಯ ಮೇಲೆ ಆಕೆಗೆ ಹುಟ್ಟುವ ಮಗುವಿನ ಆರೋಗ್ಯ ನಿರ್ಧಾರವಾಗುತ್ತದೆ, ರಕ್ತಹೀನತೆಯು ಗರ್ಭಿಣಿ, ಬಾಣಂತಿ ಸಾಮಾನ್ಯ ಸಮಸ್ಯೆಯಾಗಿದೆ, ಪ್ರತಿದಿನ ಸಮತೋಲನ ಆಹಾರ ಸೇವಿಸುವುದರಿಂದ ಮಾತ್ರ ಪರಿಣಾಮಕಾರಿಯಾಗಿ ರಕ್ತಹೀನತೆಯನ್ನು ತಡೆಗಟ್ಟಬಹುದು, ಎಲ್ಲರೂ ಪ್ರತಿದಿನ ಏಕದಳ, ದ್ವಿದಳ ಧಾನ್ಯಗಳು, ಹಸಿರು ಸೊಪ್ಪು, ತರಕಾರಿಗಳು ಹಾಗೂ ಹಣ್ಣು-ಹಂಪಲು ಸೇವಿಸುವುದರಿಂದ ಪೌಷ್ಟಿಕ ಮಟ್ಟ ಹೆಚ್ಚುತ್ತದೆ, ಜೀವ ಮತ್ತು ಜೀವನಕ್ಕೆ ಪೌಷ್ಟಿಕ ಆಹಾರ ಸೇವನೆ ಅತ್ಯವಶ್ಯಕ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಸ್.ಎನ್.ಬಾರ್ಕಿ ವಹಿಸಿದ್ದರು. ಸಿವಿಲ್ ನ್ಯಾಯಾಧೀಶ ಸುರೇಶ ವಗ್ಗನವರ, ನ್ಯಾಯವಾದಿಗಳಾದ ಎಫ್.ಎಂ. ಮುಳಗುಂದ, ಸಂತೋಷ ಹಾಲುಂಡಿ, ಬಿ.ಜಿ ಹಿರೇಮಠ, ಎಂ.ಪಿ. ಹಂಜಗಿ, ಎನ್.ಬಿ.ಬಡಿಗೇರ, ಭಾರತಿ ಕುಲಕರ್ಣಿ, ಎಸ್.ಹೆಚ್.ಕಾಟೇನಹಳ್ಳಿ, ಎಸ್.ಎಸ್.ಕೊಣ್ಣೂರ, ಎಂ.ಜೆ.ಪಾಟೀಲ, ನಾಗರಾಜ ಬಣಕಾರ, ಆರೋಗ್ಯ ಸಹಾಯಕ ಪ್ರಶಾಂತ ನವಲೆ, ಶಿಶು ಅಭಿವೃದ್ಧಿ ಇಲಾಖೆಯ ಸಿಬ್ಬಂದಿ ಸೇರಿದಂತೆ ಇನ್ನಿತರರಿದ್ದರು,

# ಹಿತ ಮಿತ ಆಹಾರ ವಿಹಾರದಿಂದ ಆರೋಗ್ಯವಂತ ಜೀವನ

**ಧಾರವಾಡ:** ಇಂದಿನ ಜೀವನ ಶೈಲಿಯಲ್ಲಿ ಶರೀರ ಸದೃಢವಾಗಿ ಹಾಗೂ ಮನಸ್ಸು ಶಾಂತವಾಗಿ,
ನಿರ್ಮಲವಾಗಿರಲುಯೋಗ ವಿದ್ಯೆಯಿಂದ ಮಾತ್ರ ಸಾಧ್ಯ. ಇಂತಹದ್ಯೆಹಿಕ ಹಾಗೂ ಮಾನಸಿಕ ಸದೃಢತೆ ಸಾಧನೆಗೆ ಪೂರ ಕವಾಗಿದೆಎಂದುಧಾರವಾಡ ಪರಮ ಹಂಸಯೋಗ ಪೀಠದ ಡಾ.ಶೋಭಾ ಹೂಲಿಕಟ್ಟಿಅಭಿಪ್ರಾಯಪಟ್ಟರು.

ಅವರುಕರ್ನಾಟಕ ವಿದ್ಯಾವರ್ಧಕ ಸಂಘದ ಡಾ.ದಿನೇಶ ಮ.ಪರಡ್ಡಿ ಸ್ಮರಣಾರ್ಥ ದತ್ತಿಕಾರ್ಯಕ್ರಮದಲ್ಲಿ ಜೀವನಧರ್ಮ' ವಿಷಯಕುರಿತುಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು. ಇಂದಿನ ಆಧುನಿಕ ಜೀವನ ಶೈಲಿಯಲ್ಲಿ ನಾವು ಸೇವಿಸುವ ಆಹಾರ ಹಾಗೂ ಇತರ ಪದಾರ್ಥಗಳೆಲ್ಲ ವಿಷಯುಕ್ತ ಹಾಗೂ ಕಲಬೆರಕೆಯಿಂದಕೂಡಿವೆ.




ಇದರಿಂದ ದಿನಕ್ಕೊಂದು ಹೊಸ ರೋಗಗಳಿಗೆ ತುತ್ತಾಗುತ್ತಿರುವುದು ವಿಷಾದ ಕರ. ಹಿತ-ಮಿತಆಹಾರ, ವಿಹಾರದಿಂದ ಮನುಷ್ಯಆರೋಗ್ಯವಂತನಾಗಿಜೀವನ ಸಾಗಿಸಬಹುದು.

ಆಹಾರವು ಒಂದು ಔಷಧಿ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ವಯೋಮಾನಕ್ಕೆತಕ್ಕಂತೆಆಹಾರ ಸೇವನೆ, ಯೋಗದಿಂದ ಮನುಷ್ಯ ನಿರೋ-ಗಿಯಾಗಿ ಬಾಳಬಹುದು. ದೇಹ ಹಾಗೂ ಮನುಸ್ಸುಗಳ ನಡುವೆ ಸಮತೋಲ ನವನ್ನುಂಟು ಮಾಡಲು ಹಾಗೂ ಜೀವನ ಸಾರ್ಥಕಗೊಳಿಸಲು ಸತ್ಸಂಗ, ಸತ್ಕಾರ್ಯ, ಧ್ಯಾನ, ಸ್ನೇಹಿತರಜೊತೆ ಸೌಹಾರ್ದಯುತವಾದ ಸಂಬಂಧ ಒಳ್ಳೆಯ ವಿಚಾರಗಳ ವಿನಿಮಯದತೃಪ್ತಿಕರ ಜೀವನದಿಂದಜೀವನ್ಮುಕ್ತಿ ಹೊಂದಲು ಸಾಧ್ಯ. ಇದುವೇ ನಿಜವಾದ ಜೀವನ ಧರ್ಮ.ಲೌಕಿಕ ವಿಧಾನದಲ್ಲಿ ಬದುಕುವುದೇ ಜೀವನ ಧರ್ಮದ ತಿರುಳು' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕ.ವಿ.ವ. ಸಂಘದ ಅಧ್ಯಕ್ಷಚಂದ್ರಕಾಂತ ಬೆಲ್ಲದ ಮಾತನಾಡಿ, ಇಂದಿನ ಸಂಕೀರ್ಣ ಪರಿಸ್ಥಿತಿಯಲ್ಲಿ ಮಾನಸಿಕ ನೆಮ್ಮದಿಗಾಗಿ ಇಂತಹಯುಕ್ತವಾದ ಜೀವನ, ಧರ್ಮಪಾಲನೆ ಮಾಡಿದರೆಜೀವನ ಕ್ಕೊಂದು ಬೆಲೆ ಬರುವುದು. ಮುಖ್ಯವಾಗಿ ಯುವಕರು ಇದನ್ನು ಅರ್ಥೈಯಿಸಿಕೊಳ್ಳಬೇಕೆಂದರು.

ವೇದಿಕೆಯಲ್ಲಿ ದತ್ತಿದಾನಿಗಳ ಪರವಾಗಿ ಅನಿಲ ಪರಡ್ಡಿಇದ್ದರು.

# "ಪರಂ ಜ್ಯೋತಿ" ಸಾಂಸ್ಕೃತಿಕ ಕಾರ್ಯಕ್ರಮ



**ಹುಬ್ಬಳ್ಳಿ:** ಚೆನ್ನಪೇಟ್ ಜಿಹೇಶ್ವರ ಕಲ್ಯಾಣ ಮಂಟಪದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ಜಾನಪದ ನೆರಳು, ಕಲೆ ಮತ್ತು ಸಾಂಸ್ಕೃತಿಕ ನಿರ್ವಹಣೆ ಹಾಗೂ ಸಂಶೋಧನಾ ಕೇಂದ್ರ, ಹುಬ್ಬಳ್ಳಿ ಸಹಯೋಗದಲ್ಲಿ "ಪರಂ ಜ್ಯೋತಿ" ಸಾಂಸ್ಕೃತಿಕ ಕಾರ್ಯಕ್ರಮವು ನಡೆಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಧಾರವಾಡದ ಖ್ಯಾತ ಜನಪದ ಕಲಾವಿದರಾದ ಡಾ ಪ್ರಕಾಶ್ ಮಲ್ಲಿಗವಾಡರವರು ವಚನಗಳು ಹಾಗೂ ಜನಪದ ನೃತ್ಯಗಳು ಆಧುನಿಕ ಯುಗದಲ್ಲಿ ಜನತೆಗೆ ಮಾನವೀಯ ಮೌಲ್ಯಗಳನ್ನು ಕಟ್ಟಿಕೊಡುವ ಒಂದು ಶಿಕ್ಷಣದ ರೂಪವಾಗಿದೆ. ಮಾನವಿಯತೆ ಪರಂ ಜ್ಯೋತಿಯ ಬೆಳಕು ಎಲ್ಲರಲ್ಲೂ ಮೂಡಬೇಕಿದೆ ಎಂದರು.

ಇನ್ನೊರ್ವ ಅತಿಥಿಗಳಾದ ದತ್ತಾತ್ರೇಯ ತಾಂಬೆ ಅವರು ಮಾತನಾಡಿದರು.

ಹುಬ್ಬಳ್ಳಿಯ ಯುವ ಜನಪದ ನೃತ್ಯ ಕಲಾವಿದರಾಗಿರುವ ಸಾಲಿಯಾನ್ ಸಂತೋಷರವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚೌಕಿಮನೆ ನೃತ್ಯ ಗುರುಕುಲದಿಂದ ನೃತ್ಯ ಪ್ರದರ್ಶನ ಅದ್ಭುತವಾಗಿ ಮೂಡಿ ಬಂದಿತು.

# ಲಕ್ಷ್ಮೇಶ್ವರ ಪುರಸಭೆ ಸಾಮಾನ್ಯ ಸಭೆ

**ಲಕ್ಷ್ಮೇಶ್ವರ :** :ಪಟ್ಟಣದ ಪುರಸಭೆಯ ಸಾಮಾನ್ಯ ಸಭೆ ಸೋಮವಾರ ಯಲ್ಲವ್ವ ದುರ್ಗಣ್ಣವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು.

ಸಭೆಯಲ್ಲಿ ಒಟ್ಟು ಮೂರು ವಿಷಯಗಳು ಒಂದು ಲಕ್ಷ್ಮೇಶ್ವರ್ ಪಟ್ಟಣಕ್ಕೆ ಸರಬರಾಜು ಆಗುವ ತುಂಗಭದ್ರಾ ನದಿಯ ನೀರಿನ ಮುಖ್ಯ ಕೊಳವೆಯ ದುರಸ್ತಿಯಾಗಿದ್ದು ಹೊಸ ಕೊಳವೆ ಮಾರ್ಗ ಅಳವಡಿಸುವುದು ಎರಡು 2024 25 ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಲ್ಲಿ ಮುಕ್ತ ನಿಧಿಯಲ್ಲಿ 76 ಲಕ್ಷ ರೂಪಾಯಿಗಳ ಎರಡು ಪ್ಯಾಕೇಜ್ ರಸ್ತೆ ಕಾಮಗಾರಿಗಳಿಗೆ ಟೆಂಡರ್ ಕರೆದಿದ್ದು ಸದರ ಟೆಂಡರನ್ನು ರದ್ದುಪಡಿಸಿ ಹೊಸದಾಗಿ ಪರಿಷ್ಕೃತ ಕ್ರಿಯಾ ಯೋಜನೆ ತಯಾರಿ ಸುವುದು ಮೂರನೇದು ಬಜಾರದಲ್ಲಿರುವ ಸರ್ಕಾರಿ ಚಾವಡಿ ಜಾಗೆಯನ್ನು ಪುರಸಭೆಗೆ ಮಂಜೂರು ಮಾಡುವ ಕುರಿತು ಚರ್ಚಿಸುವ ವಿಷಯಗಳಾಗಿದ್ದವು.



ಮೊದಲನೇ ವಿಷಯಕ್ಕೆ ಸಂಬಂಧಪಟ್ಟಂತೆ ಕೆಯು ಡಬ್ಲ್ಯುಎಸ್ನ ಕಾರ್ಯನಿರ್ವಾಹಕ ಅಭಿಯಂತರಾದ ಹೊಸಮನಿ ಅವರು 36 ಕೋಟಿಗಳ ಹೊಸ ಪೈಪ್ ಲೈನ್ ಗೆ ಡಿಪಿಆರ್ ತಯಾರಿಸಲು ಸರ್ಕಾರದಿಂದ ಅನುಮೋದನೆ ಬಂದಿದೆ ಎಂದರು.

ಎರಡನೇ ವಿಷಯ ಸದಸ್ಯರ ಮಧ್ಯದ ಗೊಂದಲಕ್ಕೆ ಕಾರಣವಾಗಿ ಪರ ಮತ್ತು ವಿರೋಧವಾದ ಅಭಿಪ್ರಾಯ ವ್ಯಕ್ತವಾಗಿ ಆಡಳಿತಾ ರೂಢ ಪಕ್ಷದವರು ರದ್ದುಪಡಿಸುವಂತೆ ಲಿಖಿತ ಹೇಳಿಕೆಯನ್ನು ನೀಡಿ-ದರೆ ರದ್ದುಪಡಿಸಬಾರದು ಎಂದು ವಿರೋಧ ಪಕ್ಷದ ಸದಸ್ಯರು ಲಿಖಿತ ಹೇಳಿಕೆಯನ್ನು ಸಭಾಧ್ಯಕ್ಷರಿಗೆ ನೀಡಿದರು.

ಚರ್ಚೆ ಗಂಭೀರತೆಯನ್ನು ಪಡೆದು ಸದಸ್ಯರು ಪರಸ್ಪರ ಕಿತ್ತಾಡಿಕೊಂಡು ಏಕವಚನದಲ್ಲಿ ಮಾತನಾಡಿದ್ದು ಇಡೀ ಸಭೆ ಗೊಂದಲದ ಗೂಡಾಗಿತ್ತು.

ಚರ್ಚೆಯಲ್ಲಿ ರಾಜು ಕುಂಬಿ ಬಸವರಾಜ್ ಓದೋನವರ ಮಹೇಶ ಹೊಗೆ ಸೊಪ್ಪಿನ ರಾಮು ಗಡದವರ ಸಿಕಂದರ್ ಕಣಕೆ ಮುಸ್ತಾಖ್ಅಮದ್ ಶಿರಹಟ್ಟಿ ಪೂರ್ಣಿಮಾ ಪಾಟೀಲ್ ಪೂಜಾ ಕರಾಟೆ ವಾಣಿ ಹತ್ತಿ ಜಯಕ್ಕ ಕಳ್ಳಿ, ವಿಜಯ ಕರಡಿ ಸಾಹೇಬ್ ಜಾನ್ ಹವಾಲ್ದಾರ ಮಹದೇವಪ್ಪ ಅಣ್ಣಿಗೇರಿ, ಅಶ್ವಿನಿ ಅಂಕಲಕೋಟಿ, ಪ್ರವೀಣ್ ಬಾಳಿಕಾಯಿ ಪಾಲ್ಗೊಂಡಿದ್ದರು.

ಸಭೆ, ವೇದಿಕೆ ಮೇಲೆ ಉಪಾಧ್ಯಕ್ಷ ಫಿರ್ದೋಷ ಆಡೂರು ಮುಖ್ಯ ಅಧಿಕಾರಿ ಮಹೇಶ ಹಡಪದ ಅಭಿಯಂತರ ವೀರೇಂದ್ರ ಸಿಂಗ್ ಕಾಟೆವಾಲೆ ಇದ್ದರು.

ಕಲಾಪದಲ್ಲಿ ಕಂದಾಯ ಅಧಿಕಾರಿ ಶಿವಾನಂದ ಅಜ್ಜಣ್ಣವರ ವ್ಯವಸ್ಥಾಪಕಿ ಮಂಜುಳಾ ಹೂಗಾರ ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್ ಮುದುಗಲ್ಲ ಹನುಮಂತ ನಂದಣ್ಣನವರ ಇದ್ದರು.

# ಪ್ರತಿಭಾ ಪುರಸ್ಕಾರ

**ಹುಬ್ಬಳ್ಳಿ,:** ಬಿಲ್ಲವ ಸಮಾಜ ಸೇವಾ ಸಂಘ ವತಿಯಿಂದ ಶ್ರೀ ಸತ್ಯನಾರಾಯಣ ಮಹಾಪೂಜೆ ಹಾಗೂ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಉತ್ಸವ ಮತ್ತು ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಗರದ ವಿದ್ಯಾನಗರದ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಸಾಧನೆಗೈದ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಬಿಲ್ಲವ ಸಿರಿ ಪ್ರಶಸ್ತಿಯನ್ನು ವಿಜಯ ಪೂಜಾರಿ ಮತ್ತು ಸಮಾಜದ ಸಾಧಕರಾದ ಸಂಜೀವ್ ಪೂಜಾರಿ ಹಾಗೂ ಸಂತೋಷ್ ಈಳಿಗೇರ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷರಾದ ಆನಂದ ಪೂಜಾರಿ, ಶ್ರೀ ಅಯ್ಯಪ್ಪ ಸ್ವಾಮಿ ಭಕ್ತವೃಂದ ಟ್ರಸ್ಟ್‌ನ ಆನಂದ ಗುರುಸ್ವಾಮಿ,

ಉತ್ತರ ಪ್ರಾಂತ ಕರ್ನಾಟಕ ವಿಶ್ವ ಹಿಂದೂ ಪರಿಷತ್ ಸಹ ಕಾರ್ಯದರ್ಶಿ ವಿನಾಯಕ ತಳಗೇರಿ, ಆನಂದ ಪೂಜಾರಿ, ವಿವೇಕ ಪೂಜಾರಿ,

ಶ್ಯಾಮ ಪೂಜಾರಿ ಮೊದಲಾದವರು ಉಪಸ್ಥಿತರಿದ್ದರು.

# ಕೃಷಿ ಭಾಗ್ಯ ಯೋಜನೆಯಡಿ ವಿವಿಧ ಘಟಕಗಳ ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** 2024-25ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯಡಿ ವಿವಿಧ ಘಟಕಗಳ ಸೌಲಭ್ಯ ಪಡೆಯಲು ಜಿಲ್ಲೆಯ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ರೈತರು ಅರ್ಜಿಯ ನಮೂನೆಗಳು ಸಮೀಪದ ರೈತ ಸಂಪರ್ಕ ಕೇಂದ್ರಗಳಲ್ಲಿ ಪಡೆದು ಅರ್ಜಿ ಸಲ್ಲಿಸಬಹುದು.

ರೈತರು ಕನಿಷ್ಠ 1 ಎಕರೆ ಜಮೀನನ್ನು ಹೊಂದಿರಬೇಕು. ಈ ಯೋಜನೆಯನ್ನು ಜಿಲ್ಲೆಯ ರೈತರ ಅವಶ್ಯಕತೆಗನುಗುಣವಾಗಿ ಅಚ್ಚು ಕಟ್ಟು ಪ್ರದೇಶವನ್ನು ಒಳಗೊಂಡಂತೆ ಅನುಷ್ಠಾನಗೊಳಿಸಲಾಗುವುದು.

ಕ್ಷೇತ್ರಬದು ನಿರ್ಮಾಣಕ್ಕೆ (ಸಾಮಾನ್ಯ ವರ್ಗ 80% ಸಹಾಯಧನ & ಪರಿಶಿಷ್ಟ ಜಾತಿ / ಪರಿಶಿಷ್ಟ ವಂಗಡ ವರ್ಗ 90%), ಕೃಷಿ ಹೊಂಡ (ಸಾಮಾನ್ಯ ವರ್ಗ 80% ಸಹಾಯಧನ & ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗ 90%), ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ (ಸಾಮಾನ್ಯ ವರ್ಗ 80% ಸಹಾಯಧನ & ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗ 90%), ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (ಸಾಮಾನ್ಯ ವರ್ಗ 40% ಸಹಾಯಧನ & ಪರಿಶಿಷ್ಟ ಜಾತಿ / ಪರಿಶಿಷ್ಟ ವಂಗಡ ವರ್ಗ 50%), ಕೃಷಿ ಹೊಂಡದಿಂದ ನೀರು ಎತ್ತಲು ಡಿಸೇಲ್ / ಪೆಟ್ರೋಲ್ ಪಂಪ್‌ಸೆಟ್ (ಸಾಮಾನ್ಯ ವರ್ಗ 80% ಸಹಾಯಧನ & ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗ 90%), ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ (ತುಂತುರು / ಹನಿ) ನೀರಾವರಿ (ಎಲ್ಲಾ ವರ್ಗದ ರೈತರಿಗೆ 90%) ಸೌಲಭ್ಯಗಳನ್ನು ನಿಯಮಾನುಸಾರ ನೀಡಲಾಗುವುದು.

ರೈತರು ತಮ್ಮ ಜಮೀನುಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಂಡು ಮಳೆ ನೀರನ್ನು ಸಂಗ್ರಹಿಸಿ ಬೆಳೆಗಳ ಸಂದಿಗ್ದ ಹಂತದಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಕೃಷಿ ಭಾಗ್ಯ ಯೋಜನೆಯ ಉದ್ದೇಶವಾಗಿದ್ದು, ಪ್ರತಿಯೊಬ್ಬ ಫಲಾನುಭವಿಗೆ ಮೇಲೆ ತಿಳಿಸಿದ ಎಲ್ಲಾ ಘಟಕಗಳನ್ನು ಕಡ್ಡಾಯವಾಗಿ ಅನುಷ್ಠಾನ ಮಾಡಲಾಗುವುದು ಎಂದು ಕೊಪ್ಪಳ ಜಂಟಿ ಕೃಷಿ ನಿರ್ದೇಶಕರಾದ ಟಿ.ಎಸ್.ರುದ್ರೇಶಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೌಕರರ ಆತ್ಮಸ್ಥೈರ್ಯ ಹೆಚ್ಚಿಸುವಲ್ಲಿ ದತ್ತಿನಿಧಿ ಕಾರ್ಯಕ್ರಮಗಳು ಮಹತ್ವದ್ದಾಗಿದೆ: ಜೆ.ಎಸ್.ಪೂಜಾರಿ

**ವಿಜಯಪುರ :** ಕನ್ನಡ ಸಾಹಿತ್ಯ ಪರಿಷತ್ತು ದತ್ತಿ ನಿಧಿಗಳ ಮೂಲಕ ಜಿಲ್ಲೆಯಲ್ಲಿ ಅತ್ಯುತ್ತಮ ಕಾರ್ಯ ನಿರ್ವಹಿಸುತ್ತಿರುವುದು ಇಡೀ ರಾಜ್ಯಕ್ಕೆ ಹೆಮ್ಮೆ ತರುವ ವಿಷಯ ಅಲ್ಲದೆ ದತ್ತಿ ಗೋಷ್ಠಿಗಳ ಮೂಲಕ ಇಂದು ನೌಕರರ ಆತ್ಮಸ್ಥೈರ್ಯ ಹೆಚ್ಚಿಸುವ ಉಪನ್ಯಾಸಗಳನ್ನು ಏರ್ಪಡಿಸಿದ್ದು ಸಂತೋಷದ ವಿಷಯವಾಗಿದೆ ಎಂದು ಪ.ಪೂ ಶಿಕ್ಷಣ ಇಲಾಖೆಯ ವಿಶ್ರಾಂತ ಉಪನಿರ್ದೇಶಕ ಪೊ?ರ. ಜೆ.ಎಸ್. ಪೂಜಾರಿ ಅಭಿಪ್ರಾಯಪಟ್ಟರು.

ಭಾನುವಾರ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಕಸಾಪ ಜಿಲ್ಲಾ, ತಾಲೂಕಾ ಹಾಗೂ ನಗರ ಘಟಕಗಳ ಸಹಯೋಗದಲ್ಲಿ ಜರುಗಿದ ಕಂದಾಯ ಇಲಾಖೆ ನೌಕರರ ಸಂಘ ವಿಜಯಪುರ ದತ್ತಿ, ದತ್ತಿ ದಾನಿಗಳು: ಅಧ್ಯಕ್ಷರು ಕಂದಾಯ ಇಲಾಖೆ ನೌಕರರ ಸಂಘ ವಿಜಯಪುರ ಹಾಗೂ ಲಿಂ. ಬಸಪ್ಪ ಅಡಿವೆಪ್ಪ ಬಿಜ್ಜರಗಿ ದತ್ತಿ ದತ್ತಿದಾನಿಗಳು: ಅಧ್ಯಕ್ಷರು ಕಂದಾಯ ಇಲಾಖೆ ನೌಕರರ ಸಂಘ ವಿಜಯಪುರ ಇವರ ದತ್ತಿನಿಧಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಇಂದಿನ ದತ್ತಿ ಉಪನ್ಯಾಸ ವಿಶೇಷವಾಗಿ ನೌಕರರ ಸೇವಾ ಭದ್ರತೆ ಹಾಗೂ ಪಾರದರ್ಶಕ ಆಡಳಿತದ ಕುರಿತು ಏರ್ಪಡಿಸಿದ್ದು ನೌಕರರ ಸೇವಾ ದಕ್ಷತೆ ಹೆಚ್ಚಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದೆ ಎಂದರು.



ಅಧ್ಯಕ್ಷತೆ ವಹಿಸಿದ ವಿಶ್ರಾಂತ ಪ್ರಾಚಾರ್ಯ ಪೊ?ರ. ಬಿ.ಎಂ.ಆಜೂರ ಮಾತನಾಡಿ, ವಿಜಯಪುರ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರತಿ ರವಿವಾರವೂ ಸಹ ತಪ್ಪದೇ ಅತ್ಯಂತ ಮೌಲ್ಯಯುತವಾದ ವಿಷಯಗಳನ್ನು ದತ್ತಿ ಗೋಷ್ಠಿಗಳ ಮೂಲಕ ಮನದಟ್ಟು ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ ಎಂದರು.

ನೌಕರರ ಸೇವಾ ಭದ್ರತೆಯ ಕುರಿತು ಉಪನ್ಯಾಸ ನೀಡಿದ ಜಿಲ್ಲಾ ಕ.ಸಾ.ಪ ಪದಾಧಿಕಾರಿಗಳಾದ ಎಸ್.ಎಲ್ ಇಂಗಳೇಶ್ವರ ಮಾತನಾಡಿ, ನೌಕರರಿಗೆ ಸೇವೆಯಲ್ಲಿ ಭದ್ರತೆ ಇದ್ದಾಗ ಮಾತ್ರ ನೌಕರ ನಿಶ್ಚಿಂತೆಯಿಂದ ತನ್ನ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. ನೌಕರನ ಕುಟುಂಬವನ್ನು ಕೂಡ ರಕ್ಷಣೆ ಮಾಡುವ ಜವಾಬ್ದಾರಿ ಸರಕಾರ ಹೊಂದಿರುತ್ತದೆ ಅದಕ್ಕೆ ಪ್ರತಿಯಾಗಿ ಸರಕಾರಿ ನೌಕರ ವಿಧೇಯತೆಯಿಂದ ತನ್ನ ಮೇಲಾಧಿಕಾರಿಗಳಿಗೆ ಗೌರವ ನೀಡುವ ಮೂಲಕ ಸರ್ಕಾರದ ಜನಪರ ಕಾರ್ಯಕ್ರಮಗಳನ್ನು ಜನರಿಗೆ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನ ಮಾಡಿ ಸರ್ಕಾರದ ಘನತೆ ಗೌರವಗಳನ್ನು ಹೆಚ್ಚಿಸಬೇಕೆಂದರು.

"ಪಾರದರ್ಶಕ ಆಡಳಿತ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಸಮಾಜ ಕಲ್ಯಾಣ ಇಲಾಖೆಯ ಅಧೀಕ್ಷಕ ರಾಜಶೇಖರ ದೈವಾಡಿ ಮಾತನಾಡಿ, ಪಾರದರ್ಶಕತೆ ಎಂಬುದು ಮನೆಯಿಂದಲೇ ಪ್ರಾರಂಭವಾಗಬೇಕು. "ಕಾಯಕವೇ ಕೈಲಾಸ" ಎಂಬ ಬಸವಣ್ಣನವರ ವಾಣಿಯನ್ನು ನೆನೆಯುತ್ತಾ ಏನಿದ್ದರೇನು ಜೀವನದಲ್ಲಿ ತೃಪ್ತಿ ಕೊಡುವ ವೃತ್ತಿಯನ್ನು ಮಾಡಬೇಕು. ಪ್ರಾಮಾಣಿಕತೆ, ಸಮಯ ಪ್ರಜ್ಞೆ,ನೌಕರನ ಮೂಲಮಂತ್ರವಾಗಬೇಕು. ಪ್ರತಿಯೊಂದು ಇಲಾಖೆಯ ಮೇಲಾಧಿಕಾರಿಗಳು ಸಹ ಅಧೀನ ಹಂತದ ಎಲ್ಲ ನೌಕರರಿಗೆ ಗೌರವಿಸುವ ಮೂಲಕ ಆತ್ಮದ ಉನ್ನತಿಯ ಮೂಲಕ ಹೃದಯ ಶ್ರೀಮಂತಿಕೆಯಿಂದ ಕರ್ತವ್ಯ ನಿರ್ವಹಿಸಿದಾಗ ಮಾತ್ರ ಆಡಳಿತದಲ್ಲಿ ಪಾರದರ್ಶಕತೆಯನ್ನು ತರಲು ಸಾಧ್ಯ ಎಂದರು.

ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಬಸಲಿಂಗಯ್ಯ ಮಠ, ಗುತ್ತಪ್ಪಗೌಡ ರಾಜಾಪುರ, ಬಿ.ಕೆ ಗೋಟ್ಯಾಳ, ವಿಜಯಲಕ್ಷ್ಮಿ ಹಳಕಟ್ಟಿ, ರಾಜೇಸಾಬ ಶಿವನಗುತ್ತಿ ಮಾತನಾಡಿದರು.

ಗೌರವ ಕಾರ್ಯದರ್ಶಿ ಡಾ. ಮಾಧವ ಗುಡಿ ಸ್ವಾಗತಿಸಿ ಗೌರವಿಸಿದರು. ಡಾ. ಆನಂದ ಕುಲಕರ್ಣಿ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕಿ ಶಿಲ್ಪಾ ಭಸ್ಮೆ ನಿರೂಪಿಸಿದರು. ಮಮತಾ ಮುಳಸಾವಳಗಿ ವಂದಿಸಿದರು. ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಹಾಸಿಂಪೀರ ವಾಲೀಕಾರ, ಪದಾಧಿಕಾರಿಗಳಾದ ಡಾ. ಸಂಗಮೇಶ ಮೇತ್ರಿ, ಸಿದ್ರಾಮಯ್ಯ ಲಕ್ಕುಂಡಿಮಠ. ಅಭಿ??ಕ ಚಕ್ರವರ್ತಿ, ರವಿ ಕಿತ್ತೂರ. ಮಹಮ್ಮದಗೌಸ ಹವಾಲ್ದಾರ. ವಿದ್ಯಾವತಿ ಅಂಕಲಗಿ. ಸುರೇಶ ಜತ್ತಿ. ರಜಾಕ ಮುಲ್ಲಾ. ಪ್ರದೀಪ ಕುಲಕರ್ಣಿ. ಕೆ ಎಸ ಹಣಮಾಣಿ. ಅಲಿಸಾಬ ಖಡಕೆ. ಕೆ.ಎಫ್ ಅಂಕಲಗಿ. ಶೋಭಾ ಬಡಿಗೇರ. ಭಾಗೀರತಿ ಸಿಂಧೆ. ಅಮಸಿದ್ದ ಪೂಜಾರಿ. ಶಾಂತಾ ವಿಭೂತಿ. ಕಾದರ ವಾಲೀಕಾರ, ಮಕ್ಬುಲ್ ಕೀಜಿ. ಪರವೀನ ಶೇಖ. ಈ.ಎಸ್. ಬಳ್ಳೂರ. ಎಚ್. ಎಸ್. ದೈವಾಡಿ, ಎನ್.ಕೆ. ಕುಂಬಾರ, ಬಿ.ಎಮ್. ಮಸಬಿನಾಳ ಮುಂತಾದವರು ಉಪಸ್ಥತರಿದ್ದರು.

# ಆಸ್ತಿ ತೆರಿಗೆದಾರರಿಗೆ ಶೇ. 5 ರಷ್ಟು ರಿಯಾಯತಿ ನೀಡುವ ಅವಧಿ ವಿಸ್ತರಣೆ

**ಬೆಳಗಾವಿ :** 2024-25ನೇ ಆಸ್ತಿ ತೆರಿಗೆಯನ್ನು ಸಂಪೂರ್ಣವಾಗಿ ಪಾವತಿಸುವ ತೆರಿಗೆದಾರರಿಗೆ ಶೇ.5 ರಷ್ಟು ರಿಯಾಯತಿ ನೀಡುವ ಅವಧಿಯನ್ನು ಸೆ. 14 ವರೆಗೆ ವಿಸ್ತರಿಸಲಾಗಿದೆ.

ಆಸ್ತಿ ತೆರಿಗೆಯನ್ನು ಆನ್‌ಲೈನ್ ಮೂಲಕ ಪಾವತಿಸುವ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ Online payment Integration of property tax ಸಾಫ್ಟವೇರ್‌ನ್ನು ಪಾಲಿಕೆ ವತಿಯಿಂದ ಅಭಿವೃದ್ಧಿ ಪಡಿಸಲಾಗಿದು.

ಆಸ್ತಿ ತೆರಿಗೆದಾರರು ಈಗಾಗಲೇ ತಮ್ಮ ಆಸ್ತಿ ತೆರಿಗೆಯ ಕುರಿತು ಪಿಐಡಿ ಕುರಿತು ಇರುವ ಗಣಕೀಕೃತ ಫಾರ್ಮ-1 ಪಡೆದವರು ಬೆಳಗಾವಿ-1 ಕೇಂದ್ರಗಳಲ್ಲಿ ಹಾಗೂ ಡೆಬಿಟ್ ಕಾರ್ಡ, ಕ್ರೆಡಿಟ್ ಕಾರ್ಡ, ನೇಟ್ ಬ್ಯಾಂಕಿಂಗ್ ಮೂಲಕವೂ ತಮ್ಮ ಆಸ್ತಿ ತೆರಿಗೆಯನ್ನು ಪಾವಿತಿಸಬಹುದಾಗಿದೆ.

ಆಸ್ತಿ ತೆರಿಗೆದಾರರು ಪಾಲಿಕೆಯ ವೆಬ್‌ಸೈಟ್ www.belagavicitycorp.org ಗೆ ಸೆಪ್ಟಂಬರ 14 ರೊಳಗಾಗಿ ಭೇಟಿ ನೀಡಿ ಆಸ್ತಿ ತೆರಿಗೆಯನ್ನು ಪಾವತಿಸಬಹುದಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲ್ಯಾಣ ಕರ್ನಾಟಕ ಉತ್ಸವ: ಪೂರ್ವಸಿದ್ಧತಾ ಸಭೆ

## ವ್ಯವಸ್ಥಿತವಾಗಿ ಕಲ್ಯಾಣ ಕರ್ನಾಟಕ ಉತ್ಸವ ಆಯೋಜಿಸಿ: ನಲಿನ್ ಅತುಲ್

**ಕೊಪ್ಪಳ :** ಸೆಪ್ಟೆಂಬರ್ 17ರ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋ ಜನೆ ಮಾಡುವಂತೆ ಜಿಲ್ಲಾಧಿಕಾ ರಿಗಳಾದ ನಲಿನ್ ಅತುಲ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಲ್ಯಾಣ ಕರ್ನಾಟಕ ಉತ್ಸವ ದಿನ ಆಚರಣೆ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿಗಳ ಕಚೇರಿ ಸಭಾಂ ಗಣದಲ್ಲಿ ಸೆಪ್ಟೆಂಬರ್ 04ರಂದು ಆಯೋಜಿಸಿದ್ದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ನಿಮಿತ್ತ ಸೆಪ್ಟೆಂಬರ್ 17ರಂದು ಬೆಳಿಗ್ಗೆ 8 ಗಂಟೆ-ಗೆ ಜಿಲ್ಲಾಡಳಿತ ಭವನದ ಆವರಣದಲ್ಲಿ ಮತ್ತು ಬೆಳಿಗ್ಗೆ 9ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನಡೆಯಲಿದೆ.



ಜಿಲ್ಲಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಅಧಿಕಾರಿಗಳು ಎರಡೂ ಕಾರ್ಯಕ್ರಮಗಳಿಗೆ ತಮ್ಮ ಸಿಬ್ಬಂದಿಗಳೊಂದಿಗೆ ಕಡ್ಡಾಯವಾಗಿ ಭಾಗವಹಿಸಬೇಕು. ಜಿಲ್ಲಾ ಕೇಂದ್ರದ ಪ್ರಮುಖ ರಸ್ತೆಗಳು, ವೃತ್ತಗಳ ಸ್ವಚ್ಛತೆ ಹಾಗೂ ಅಲಂಕಾರಕ್ಕೆ ಹಾಗೂ ಕ್ರೀಡಾಂಗಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ನಗರಸಭೆಯಿಂದ ಅಗತ್ಯ ಕ್ರಮ ವಹಿಸಬೇಕು. ಪರೇಡ್‌ನಲ್ಲಿ ಭಾಗವಹಿಸುವ ಮಕ್ಕಳಿಗೆ ತರಬೇತಿ ಸಮಯದಲ್ಲಿ ಮತ್ತು ಕಲ್ಯಾಣ ಕರ್ನಾಟಕ ಉತ್ಸವ ದಿನದಂದು ಉಪಹಾರ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಸಂಬಂಧಪಟ್ಟ ಇಲಾಖೆಗಳು ಕ್ರಮ ವಹಿಸಬೇಕು ಎಂದರು.

ಕಲ್ಯಾಣ ಕರ್ನಾಟಕ ಉತ್ಸವ ನಿಮಿತ್ತ ರಚಿಸಲ್ಪಟ್ಟ ಸಮಿತಿಗಳು ತಮಗೆ ವಹಿಸಲಾದ ಕರ್ತವ್ಯಗಳನ್ನು ಚಾಚೂ ತಪ್ಪದೇ ಪಾಲಿಸಬೇಕು. ಯಾವುದೇ ನಿಯಮ ಉಲ್ಲಂಘನೆಯಾ ಗದಂತೆ ಹಾಗೂ ಸರ್ಕಾರದ ಶಿಷ್ಟಾಚಾರ ಪಾಲನೆಯೊಂದಿಗೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸರ್ಕಾರಿ ಶಾಲಾ ಕಾಲೇಜುಗಳಿಗೆ ಆದ್ಯತೆ ನೀಡಲು ಶಾಲಾ ಶಿಕ್ಷಣ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಗಳ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಕಾರ್ಯಕ್ರಮಕ್ಕೆ ಆಗಮಿಸುವ ಶಾಲಾ ಕಾಲೇಜುಗಳ ಮಕ್ಕಳಿಗೆ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯಿಂದ ಬಸ್ ಸೌಲಭ್ಯ ಕಲ್ಪಿಸಿ, ಮಕ್ಕಳನ್ನು ಜಿಲ್ಲಾ ಕ್ರೀಡಾಂಗಣಕ್ಕೆ ಕರೆದು-ಕೊಂಡು ಹೋಗಿ ಮತ್ತೆ ಬಸ್ ಮೂಲಕ ನಿಗದಿತ ಸ್ಥಳಕ್ಕೆ ಬಿಡಲು ಕ್ರಮ ವಹಿಸುವಂತೆ ಕ.ಕ.ರ.ಸಾ ಸಂಸ್ಥೆಯವರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಹೇಮಂತ ಕುಮಾರ್, ಉಪ ವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಪಂ ಉಪಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ ತೊದಲಬಾಗಿ, ಜಂಟಿ ಕೃಷಿ ನಿರ್ದೇಶಕರಾದ ಟಿ.ಎಸ್.ರುದ್ರೇಶಪ್ಪ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ವೀಠ್ಠಲ್ ಜಾಬಗೌಡರ, ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಹಾಲಿಂಗಪುರ ಪಟ್ಟಣಕ್ಕೆ ಕೋರ್ಟ್ ತರಲು ಪ್ರಯತ್ನಿಸುವೆ: ವೈ. ಬಿ. ಪಾಟೀಲ



**ಮಹಾಲಿಂಗಪುರ :** ಬೆಳೆಯುತ್ತಿರುವ ಮಹಾಲಿಂಗಪುರ ಪಟ್ಟಣ ಹಾಗೂ ಸುತ್ತಲಿನ ಹತ್ತಾರು ಹಳ್ಳಿಗಳ ಜನರಿಗೆ ನ್ಯಾಯಾಂಗ ಸೇವೆ ಸುಲಭವಾಗಲು ಪಟ್ಟಣದಲ್ಲಿ ಕೋರ್ಟ್ ಪೀಠ ಸ್ಥಾಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವೆ ಎಂದು ಪುರಸಭೆ ನೂತನ ಅಧ್ಯಕ್ಷ ವೈ.ಬಿ.ಪಾಟೀಲ ಹೇಳಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ವಕೀಲರ ಸಂಘದವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿ ಪಟ್ಟಣಕ್ಕೆ ಅಗತ್ಯವುರುವ ಕೋರ್ಟ್ ಸ್ಥಾಪಿಸಲು ತಮ್ಮೊಂದಿಗೆ ರಾಜಧಾನಿವರೆಗೂ ಬಂದು ಸರಕಾರಕ್ಕೆ ಒತ್ತಾಯಿಸುತ್ತೇನೆ ಎಂದು ಹೇಳಿ ಕೋರ್ಟ್ ಪೀಠಕ್ಕೆ ಬೇಕಾದ ಅಗತ್ಯ ಜಾಗೆಯನ್ನು ನೀಡುವ ಭರವಸೆ ನೀಡಿದರು.

ವಕೀಲರ ಸಂಘದಿಂದ ನೂತನ ಅಧ್ಯಕ್ಷ ಯಲ್ಲನಗೌಡ ಪಾಟೀಲ ಮತ್ತು ಉಪಾಧ್ಯಕ್ಷೆ ಶೀಲಾ ರಾಜೇಶ ಭಾವಿಕಟ್ಟಿ ಅವರನ್ನು ಸನ್ಮಾನಿಸಲಾಯಿತು. ವಿಜುಗೌಡ ಪಾಟೀಲ, ವಕೀಲರಾದ ಎಂ.ಎಸ್.ಮನ್ನಯ್ಯನವರಮಠ, ಎಸ್.ಎಸ್.ನಕಾತಿ, ಎಂ.ಕೆ.ನರಗಟ್ಟಿ, ಸಿ.ಎಂ.ಸಂಕ್ರಟ್ಟಿ, ಎಂ.ಜಿ.ಮಗದುಮ್, ಎ.ಎ.ಮುರಗೋಡ, ಎಂ.ಬಿ.ಬಡಿಗೇರ, ಜೆ.ಆರ್.ಬಾಡಗಿ, ಎ.ಐ. ಜಕಾತಿಮಠ, ಎಂ.ಕೆ.ಸಂಗನ್ನವರ, ಎ.ಕೆ.ಓಸ್ವಾಲ, ಎಂ.ಎ.ಧರವಾನ, ಎ.ಎನ್.ಖೇತಗೌಡ ಇದ್ದರು.

# ವೈದ್ಯಳಾಗಬೇಕೆಂಬ ಲಕ್ಷ್ಮೀ ಕನಸಿಗೆ ಲಕ್ಷ್ಮೀಯ ಬಲವಿಲ್ಲ ! ಉಪನ್ಯಾಸಕರಿಂದ ಅಭಯ ಹಸ್ತ ! ಇನ್ನೂ ಬೇಕಿದೆ ನೆರವಿನ ಹಸ್ತ !

**ಮಹಾಲಿಂಗಪುರ :** ಪ್ರತಿಭೆಯ ಚಿನ್ನ ಬಡತನದ ಕುಲುಮೆಯಲ್ಲೇ ಹುಟ್ಟುತ್ತದೆ ಎಂಬ ಮಾತಿಗೆ ಸಾಕ್ಷಿ ಎಂಬಂತೆ ಬಡ ಕೂಲಿಕಾರನ ಮಗಳು ಪಿಯುಸಿಯಲ್ಲಿ ಪ್ರಥಮ ಮತ್ತು ನೀಟ್ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್ ಪಡೆದು ಪಾಲಕರನ್ನು ಪಾವನಗೊಳಿಸಿದ್ದಾಳೆ.

ಮಹಾಲಿಂಗಪುರದ ಹಟಗಾರ ನೇಕಾರ ಸಮಾಜದ ಬಡ ಕೂಲಿಕಾರ ಸಂಗಪ್ಪ ಮಂಟೂರ ಎಂಬಾತ ತನ್ನ 4 ಜನ ಹೆಣ್ಣು ಮಕ್ಕಳಿಗೂ ಉತ್ತಮ ಶಿಕ್ಷಣ ಕೊಡಿಸಿದ್ದಾನೆ. ಅವರ ಪೈಕಿ ಲಕ್ಷ್ಮೀ ಮಂಟೂರ ಪಿಯುಸಿ ಸೈನ್ಸ್ ಮತ್ತು ನೀಟ್ ಪರೀಕ್ಷೆ ಪಾಸಾಗಿ ವೈದ್ಯಳಾಗುವ ಉತ್ಕಟ ಆಸೆ ಇಟ್ಟುಕೊಂಡಿದ್ದಾಳೆ. ಆದರೆ ಆಕೆಯ ಕನಸಿಗೆ ಬಡತನ ಅಡ್ಡಿಯಗುತ್ತಿರುವುದು ವಿಷಾದಕರ ಸಂಗತಿ.

ಲಕ್ಷ್ಮೀ ಮಂಟೂರ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.97 ಅಂಕ ಪಡೆದಾಗ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪಿಯು ಕಾಲೇಜಿನಲ್ಲಿ



ವಿಜ್ಞಾನ ವಿಭಾಗಕ್ಕೆ ಪ್ರವೇಶ ಪಡೆಯುವಾಗ ಉಪನ್ಯಾಸಕರು ಹಣಕಾಸಿನ ನೆರವು ನೀಡಿದ್ದರು. ಅದರ ಪ್ರಯೋಜನ ಪಡೆದ ಲಕ್ಷ್ಮೀ ಕಳೆದ ವರ್ಷ ಪಿಯುಸಿ ಶೇ.94 ಅಂಕ ಪಡೆದು ಪಾಸಾಗಿದ್ದಳು. ನಂತರ ನೀಟ್ ಪರೀಕ್ಷೆ ಬರೆದು 97504ನೇ ರ್‍ಯಾಂಕ್ ಪಡೆದರು. ವೈದ್ಯಳಾಗುವ ಆಸೆಯಿಂದ ಎಂಬಿಬಿಎಸ್ ಮಾಡಲು ಹಣಕಾಸಿನ ಕೊರತೆ ಉಂಟಾಗಿದೆ.

ಲಕ್ಷಾಂತರ ರೂ. ಶುಲ್ಕ ಕೇಳಿ ದಂಗಾದ ಪಾಲಕ ತನ್ನ ಮಗಳ ಕಲಿಕೆಯ ಆಸೆ ಯಾವತ್ತೂ ಕಮರಬಾರದೆಂದು ದುಡಿದದ್ದನ್ನೆಲ್ಲಾ ಸುರಿದು, ಸಾಲ ತಂದು ಶುಲ್ಕ ಭರಿಸಲು ಹೆಣಗಾಡುತ್ತಿದ್ದಾರೆ. ಅವರ ಪರದಾಟ ಕಂಡು ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪಿಯು ಕಾಲೇಜ್ ಪ್ರಾಚಾರ್ಯ ಎಲ್.ಬಿ.ತುಪ್ಪದ 10 ಸಾವಿರ ರೂ. ಸಹಾಯಧನ ನೀಡಿದ್ದಾರೆ. ಅಲ್ಲದೇ ಈ ಹಿಂದೆ ಆ ಬಾಲಕಿಯ ಶಿಕ್ಷಣಕ್ಕೆ ನೆರವಾಗಿದ್ದ ಉಪನ್ಯಾಸಕ ಆರ್.ಎನ್.ಪಟ್ಟಣಶೆಟ್ಟಿ ತನ್ನ ಮನೆಗೆ ತಂದೆ–ಮಗಳನ್ನು ಕರೆಸಿ ಮತ್ತೆ 50 ಸಾವಿರ ರೂ. ಚೆಕ್ ನೀಡಿ ಪ್ರೋತ್ಸಾಹಿಸಿದ್ದಾರೆ. ಆದರೆ ದುಬಾರಿ ಮೆಡಿಕಲ್ ಶಿಕ್ಷಣ ಪೂರ್ಣವಾಗಲು ಮತ್ತು ನಿರಂತರ ಬರುವ ಖರ್ಚು ನಿಭಾಯಿಸಲು ಅವರ ಆದಾಯ ಸಾಕಾಗುವುದಿಲ್ಲ. ಎಲ್ಲಾ ಅನುಕೂಲವಿದ್ದರೂ ಹೆಣ್ಣು ಮಕ್ಕಳ ಶಿಕ್ಷಣ ಅರ್ಧಕ್ಕೇ ಮೊಟಕುಗೊಳಿಸುವ ಪಾಲಕರ ಮಧ್ಯೆ ಬಡತನದಲ್ಲೂ ಮಗಳ ಆಶಯಕ್ಕೆ ತಕ್ಕಂತೆ ಶಿಕ್ಷಣ ಕೊಡಿಸಲು ಹೋರಾಟ ಮಾಡುತ್ತಿರುವ ಪಾಲಕನಿಗೆ ನೆರವಿನ ಹಸ್ತ ಬೇಕಾಗಿದೆ. ಆಕೆಯ ಶಿಕ್ಷಣಕ್ಕೆ ಸ್ವ ಇಚ್ಛೆಯಿಂದ ಸಹಾಯ ಸಲ್ಲಿಸುವವರು ಮೋ.9606093058 ಸಂಖ್ಯೆಗೆ ಕರೆ ಮಾಡಬಹುದು. ವಿದ್ಯಾರ್ಥಿನಿಯ ಬ್ಯಾಂಕ್ ಖಾತೆ ಸಂಖ್ಯೆ: (ಕೆನರಾ ಬ್ಯಾಂಕ್) 08732210000267 ಗೆ ಹಣ ವರ್ಗಾವಣೆ ಮಾಡಬಹುದು.

# ನಗರಸಭೆಯ ನೂತನ ಅಧ್ಯಕ್ಷರಿಗೆ ಸನ್ಮಾನ, ಮನವಿ ಸಲ್ಲಿಕೆ



**ಜಮಖಂಡಿ :** ಸ್ಥಳೀಯ ನಗರಸಭೆ ಸಭಾಭವನದಲ್ಲಿ ಕರ್ನಾಟಕರತ್ನ ಡಾ ರಾಜಕುಮಾರ್ ಕನ್ನಡ ಬಳಗದಿಂದ ನಗರಸಭೆ ಅಧ್ಯಕ್ಷರಾಗಿ ಗೆಲವು ಸಾಧಿಸಿದ ಪರಮಾನಂದ ಗವರೋಜಿ ಅವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ನಗರದ ಎಸ್. ಆರ್.ಎ. ಕ್ಲಬ್‌ದಿಂದ ಅರಣ್ಯ ಇಲಾಖೆ ಕಛೇರಿ ರಸ್ತೆಯವರೆಗೆ ಪವರ್ ಸ್ಟಾರ್ ದಿವಂಗತ ಡಾ. ಪುನೀರರಾಜಕುಮಾರ ರಸ್ತೆ ಎಂದು ನಾಮಕರಣ ಮಾಡಬೇಕೆಂದು ಮನವಿ ಸಲ್ಲಿಸಿದರು.

ಕರ್ನಾಟಕ ರತ್ನ ಡಾ.ರಾಜಕುಮಾರ ಕನ್ನಡ ಬಳಗ ತಾಲೂಕಾಧ್ಯಕ್ಷ ನಾರಾಯಣ ಕಲಬುರ್ಗಿ, ರಾಜು ಶಿವಣಗಿ, ಸುರೇಶ ಹಿರೇಮಠ, ಶ್ರೀನಿವಾಸ .ಕಟ್ಟಿಮನಿ, .ಜಗದೀಶ ಕರಡಿ, .ಚನ್ನಕೇಶವ ಅವರಾದಿ, ವಿಠ್ಠಲ ಕಾಂಬಳೆ ಸಹಿತ ಹಲವರು ಇದ್ದರು.

## ಪ್ರತಿಭೆ ಅನಾವರಣಗೊಳ್ಳಲು ಪ್ರತಿಭಾ ಕಾರಂಜಿ ಸೂಕ್ತ ವೇದಿಕೆ–ಸಿದ್ದು ಸವದಿ

# ಚಿಮ್ಮಡದಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ

**ಚಿಮ್ಮಡ :** ಮಕ್ಕಳಲ್ಲಿರುವ ಅಡಗಿರುವ ಪ್ರತಿಭೆಯನ್ನು ಅ ನಾ ವ ರ ಣ ಗೊ ಳಿ ಸ ಲು ಪ್ರತಿಭಾ ಕಾರಂಜಿ ಸೂಕ್ತ ವೇದಿಕೆಯಾಗಿದ್ದು ಮಕ್ಕಳು ಈ ವೇದಿಕೆಯನ್ನು ಬಳಸಿಕೊಂಡು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಬೇಕೆಂದು ಶಾಸಕ ಸಿದ್ದು ಸವದಿ ಹೇಳಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ್, ಕ್ಷೇತ್ರ ಶಿಕ್ಷಣಾಧಿಕಾರಿ, ಸಮನ್ವಯಾಧಿಕಾರಿಗಳ ಕಾರ್ಯಾಲಯ, ಶಾಂತಲಾ ಅನುದಾನಿತ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಭೂಮಿಕಾ ಕನ್ನಡ ಮಾದ್ಯಮ ಪ್ರೌಢಶಾಲೆಯ ಸಂಯುಕ್ತ ಆಶ್ರಯದಲ್ಲಿ ಬುಧವಾರ ಆಯೋಜಿಸಲಾಗಿದ್ದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು



ಸಂಗೀತ, ಜನಪದ ಕಲೆ, ನೃತ್ಯ, ಧಾರ್ಮಿಕ ಪಠನ ಸೇರಿದಂತೆ ಹಲವಾರು ಕಲೆಗಳನ್ನು ಮಕ್ಕಳು ಪ್ರದರ್ಶಿಸುತ್ತಿರುವುದರಿಂದ ಎಲೆ ಮರೆಯ ಕಾಯಿಯಂತಿರುವ ಪ್ರತಿಭೆ ಸಾರ್ವಜನಿಕಗೊಂಡು ಬದುಕಿಗೊಂದು ನೆಲೆಯಾಗಬಹುದು ಅಲ್ಲದೇ ಮಕ್ಕಳು ಆಟ, ಪಾಠ, ಸಾಂಸ್ಕೃತಿಕ ನೆಲೆಯಲ್ಲಿಯೂ ಪ್ರತಿಭಾವಂತರಾಗಬೇಕು ಎಂದರು.

ಕಾಂಗ್ರೆಸ್ ಧುರೀಣ ಸಿದ್ದು ಕೊಣ್ಣೂರ ಮಾತನಾಡಿ ಪ್ರತಿಭಾ ಕಾರಂಜಿಯಂತಹ ವೇದಿಕೆಗಳನ್ನು ಬಳಸಿಕೊಂಡು ಹಲವಾರು ವಿದ್ಯಾರ್ಥಿಗಳನ್ನು ರಾಜ್ಯ, ರಾಷ್ಟ್ರೀಯ ಮಟ್ಟದ ಖೇಲೋ ಇಂಡಿಯಾ ಕಾರ್ಯಕ್ರಮದಲ್ಲಿ ಭಾಗಿಯಾಗುವಂತೆ ಮಾಡಿರುವ ಶ್ರೇಯಸ್ಸು ಚಿಮ್ಮಡದ ಭೂಮಿಕಾ ಶಾಲೆಗೆ ಸಲ್ಲಬೇಕು. ಮಕ್ಕಳಲ್ಲಿ ಸರ್ವತೋಮುಖ ಬೆ ಳ ವ ಣಿ ಗೆ ಂ ುಂ ನ್ನು ಂ ಟು ಮಾಡಿ ಅವರ ಭವಿಷ್ಯವನ್ನು ಉಜ್ವಲಗೊಳಿಸುವಂತೆ ಶಿಕ್ಷಕರು ಪ್ರಯತ್ನಿಸಬೇಕು ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಜನಾರ್ಧನ ಮಹಾರಾಜರು ವಹಿಸಿದ್ದರು, ಗ್ರಾಂ.ಪಂ. ಅಧ್ಯಕ್ಷೆ ಮಾಲಾ ಮೋಟಗಿ, ರಾಮಣ್ಣ ಮುಗಳಖೋಡ, ಪುಂಡಲಿಕಪ್ಪಾ ಪೂಜಾರಿ, ಅಣ್ಣಪ್ಪಗೌಡ ಪಾಟೀಲ, ಆರ್.ಎಂ. ಬಗನಾಳ, ಗ್ರಾ.ಪಂ. ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪುಜಾರಿ, ಶಂರ ಬಟಕುರ್ಕಿ, ಪರಪ್ಪಾ ಪಾಲಭಾವಿ, ಬಸವರಾಜ ಕುಂಚನೂರ, ಆನಂದ ಕವಟಿ, ಪಿಕೆಪಿಎಸ್ ಅಧ್ಯಕ್ಷ ಹಣಮಂತ ನೇಸೂರ, ಪ್ರಭು ಮುಧೋಳ, ಶಿವಪ್ಪಾ ನಾಗನೂರ, ಬಾಳೇಶ ಬ್ಯಾಕೋಡ ಸಮನ್ವಯ ಅಧಿಕಾರಿ ಬಿ.ಎಂ. ಹಳಮನಿ, ಸಿಆರ್‌ಪಿ ದ್ರಾಕ್ಷಾಯಿಣಿ ಮಂಡಿ, ಪ್ರಶಾಂತ ಹೊಸಮನಿ ಎಂ.ಎಸ್. ಜಿಟ್ಟಿ ಸೇರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತಯರಿದ್ದರು.

ಸಂಸ್ಥಾಪಕ ಮುತ್ತು ಢವಳೇಶ್ವರ ಸ್ವಾಗತಿಸಿದರು. ಶಿಕ್ಷಕ ಮನೋಜ ಅಂಬಿ ನಿರೂಪಿಸಿದರು. ರಾಜು ಬಗನಾಳ ವಂದಿಸಿದರು.

# ಪ್ರಾಚಾರ್ಯ ಗುಜಗೊಂಡರವರಿಗೆ ಬೀಳ್ಕೊಡುವ ಸಮಾರಂಭ



**ಮೂಡಲಗಿ :** ಸರಳ ಜೀವನದ ಜೊತೆಗೆ ಉತ್ತಮ ವ್ಯಕ್ತಿತ್ವದ ಮೂಲಕ ಪ್ರತಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಭೂಗೋಳ ಶಾಸ್ತ್ರ ವಿಷಯ ಮನದಟ್ಟುಆಗುವಂತೆ ಭೋಧಿಸುವಕಲೆಗಾರಿಗೆ ಮೂಲಕ ಸತತ 37 ವರ್ಷದಿಂದ ನಮ್ಮ ಸಂಸ್ಥೆಯಲ್ಲಿಅವರದೇಆದಛಾಪು ಮೂಡಿಸಿದ ಉಪನ್ಯಾಸಕರಾಗಿ ಪ್ರಾಚಾರ್ಯರಾಗಿ ನಿವೃತ್ತಿಯಾಗುತ್ತಿರುವ ಸಂಗಮೇಶ ಗುಜಗೊಂಡಅವರನ್ನು ಬೀಳ್ಕೊಡುವ ಮನಸ್ಸು ನಮಗಿಲ್ಲ ಎಂದು ಮಾಜಿ ನಿರ್ದೇಶಕವೆಂಕಟೇಶ್ವರಸೋನವಾಲ್ಕರ ಹೇಳಿದರು.

ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೋ ಸಂಗಮೇಶ ಗುಜಗೊಂಡಅವರ ನಿವೃತ್ತಿಯಅಭಿನಂಧನಾ ಸಮಾರಂಭದಲ್ಲಿಅತಿಥಿಯಾಗಿ ಆಗಮಿಸಿ ಮಾತನಾಡಿದರು. ಸಂಸ್ಥೆಯಲ್ಲಿ ಸಲ್ಲಿಸಿದ ಸೇವೆ ಸಮಾಜಕ್ಕೆಕೊಟ್ಟ ಕೊಡುಗೆ.ವಿದ್ಯಾರ್ಥಿಗಳಿಗೆ ನೀಡಿದಅಮುಲ್ಯ ಕ್ಷಣಗಳನ್ನು ಸ್ಮರಿಸಬೇಕುಎಂದು ಹೇಳಿದರು

ಸನ್ಮಾನ ಸ್ವಿಕರಿಸಿದ ನಿವೃತ್ತ ಪ್ರಾಚಾರ್ಯ ಪ್ರೊ ಸಂಗಮೇಶ ಗುಜಗೊಂಡ ಮಾತನಾಡಿ. ಮಾಜಿಅಧ್ಯಕ್ಷರಾದಆರ್.ಆರ್ ಲೆಂಕಪೆನ್ನವರ.ಪ್ರಾಚಾರ್ಯಎಚ್ ಎ ಸೋನವಾಲ್ಕರಅವರ ಮಾರ್ಗದರ್ಶನದಲ್ಲಿ ಸೇವೆಗೆ ಸೇರಿದೆ.ಭೂಗೋಳ ಶಾಸ್ತ್ರ ವಿಷಯದಲ್ಲಿಚಿನ್ನದ ಪದಕ ಪಡದುಕೊಂಡು87 ನೇ ಇಶ್ವಿಯಲ್ಲಿ ಈ ಸಂಸ್ಥೆಯಲ್ಲಿ ಸೇವೆಗೆ ಹಾಜರಾದೆಸಹ ಪ್ರಧ್ಯಾಪಕರಒಡನಾಟ, ಭೋದಕೇತರ ಸಿಬ್ಬಂದಿಯ ಸಹಕಾರ, ಆಡಳಿತ ಮಂಡಳಿಯವರ ಪ್ರೋತ್ಸಾಹ ಮಾತುಗಳು ನನ್ನಕಾರ್ಯ ಸುರಳಿತವಾಗಿತ್ತು. ಯಾರನ್ನು ನೆನಯಬೇಕುಯಾರನ್ನು ಬಿಡಬೇಕು ಎಂಬ ದ್ವಂದ್ವಉಂಟಾಗುವಷ್ಟು ಪ್ರೀತಿ ತೊರಿಸಿದ್ದಾರೆ ಶಿಕ್ಷಣ ಸಂಸ್ಥೆಯವರುಹಾಗೂ ಮೂಡಲಗಿಯ ಸಾರ್ವಜನಿಕರು ಎಂದರು. ನಾನು ಬರೆದ ಪಾಠವನ್ನುಐದನೇಯತರಗತಿಯ ಪುಸ್ತಕದಲ್ಲಿ ಮೊದಲನೇಯ ಪಾಠವಾಗಿ ಪುಸ್ತಕ ಆಯ್ಕೆ ಸಮಿತಿಯವರು ಸೇರಿಸಿದ್ದು ನನ್ನ ಭಾಗ್ಯ, ನಿವೃತ್ತಿಯಾಗುವಾಗಯಾರೂ ಭಾವೋದ್ವೇಗಆಗಬಾರದುಎಂದರು.ಪ್ರೋ ಜಿ ವ್ಹಿ ನಾಗರಾಜ. ನಿವೃತ್ತಗ್ರಂಥಪಾಲಕ ಬಾಲಶೇಖರ ಬಂದಿ ಮಾತನಾಡಿ

ಅದ್ಯಕ್ಷತೆ ವಹಿಸಿದ ಸಂಸ್ಥೆಯಅಧ್ಯಕ್ಷ ವೆಂಕಟೇಶ ಸೋನವಾಲ್ಕರ ಸಂಗಮೇಶ ಗುಜಗೊಂಡಅವರ ಅವಿಸ್ಮರಣೀಯ ಸೇವೆಯನ್ನು ಸ್ಥಿರಸ್ಥಾಯಿಯಾಗಿ ನೆನಪಿನಲ್ಲಿಇಟ್ಟು ಕೊಳ್ಳುತ್ತೆವೆ ಎಂದರು.

ವೇದಿಕೆಯ ಮೇಲೆ ವೆಂಕಟೇಶ ಸೋನವಾಲ್ಕರ. ವಿಜಯ ಸೋನವಾಲ್ಕರ. ಅಶೋಕ ಹೊಸೂರ. ಅನೀಲ ಸತರಡ್ಡಿ. ವೆಂಕಟೇಶ್ವರ ಸೋನವಾಲ್ಕರ. ಕಮದಾಳ ಇದ್ದರು.ಡಾ ವ್ಹಿ ಆರ್‌ದೇವರೆಡ್ಡಿ.ಪ್ರೋ ಎ ಎಸ್ ಮೀಸಿನಾಯಕ.ಗ್ರಂಥಪಾಲಕ ಬಸವಂತ ಬರಗಾಲಿ.ಪ್ರೋ ಸದ್ರಾಮ ಸವಸುದ್ದಿ.ಪ್ರೋ ಸವಿತಾಕೊತ್ತಲ. ಪ್ರೋ ಪ್ರೀತಿ ಬೆಳಗಲಿ. ಮನೋಹರ ಲಮಾನಿ ವೆಂಕಟೇಶ ಪಾಟೀಲ.ಭಾರತಿ ತಳವಾರ.ಲಕ್ಷ್ಮಣ ನಂದಿ.ರಮೇಶ ಕಾನಪ್ಪಗೋಳ ವಿದ್ಯಾರ್ಥಿಗಳು.ಸಿಬ್ಬಂದಿ ಹಾಗೂ ಪ್ರೋ ಸಂಗಮೇಶ ಗುಜಗೊಂಡಅವರಆಪ್ತರು ಸಮಾರಂಭದಲ್ಲಿಇದ್ದರೂ.

# ವಿದ್ಯಾರ್ಥಿಗಳಿಂದ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

**ಜಮಖಂಡಿ :** ಸನ್ 2024–25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮಶ್ರೇಣಿಯಲ್ಲಿ ಎಸ್.ಎಸ್.ಎಲ್.ಸಿ, ಪದವಿ, ಸ್ನಾತಕೋತ್ತರ ಪದವಿ ಹಾಗೂ ಇತರೆ ಕೋರ್ಸ್‌ಗಳಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮಂಜೂರಿಗೆ ಅರ್ಜಿ ಆಹ್ವಾನಿಸಲಾಗಿದೆ.

ಜಮಖಂಡಿ ಹಾಗೂ ರಬಕವಿ–ಬನಹಟ್ಟಿ ತಾಲೂಕಿನ ವ್ಯಾಪ್ತಿಯಲ್ಲಿರುವ ಶಾಲಾ ಮತ್ತು ಕಾಲೇಜುಗಳಿಂದ ಪ್ರಥಮ ಬಾರಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿರುತ್ತದೆ. ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ ಸಂಖ್ಯೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು :https://swdservices.karnataka.gov.in/PrizeMoneyClientApp/ ಅರ್ಜಿ ಸಲ್ಲಿಸಬೇಕು.

ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸಪ್ಟೆಂಬರ 30ರವರೆಗೆ ಅವಕಾಶ ಕಲ್ಪಿಸಲಾಗಿದ್ದು, ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ನಂತರ ಅರ್ಜಿ ನಮೂನೆಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಹಾಗೂ ಸಂಬಂಧಪಟ್ಟ ಕೋರ್ಸಿನ ಎಲ್ಲ ಸೆಮಿಸರ್‌ಗಳ ಅಂಕಪಟ್ಟಿ ದೃಢೀಕರಣದೊಂದಿಗೆ ಲಗತ್ತಿಸಿ, ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ 3 ದಿನಗಳ ಒಳಗಾಗಿ ಹಾರ್ಡ್ ಕಾಪಿ ದೃಢೀಕೃತ ದಾಖಲೆಗಳೊಂದಿಗೆ ಕಾರ್ಯಾಲಯಕ್ಕೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಮೋಬೈಲ್ ಸಂಖ್ಯೆ 9480843061 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ವೇದಿಕೆ



**ರಬಕವಿ–ಬನಹಟ್ಟಿ :** ಮಕ್ಕಳಲ್ಲಿನ ಸುಪ್ತ ಪ್ರತಿಭೆ ಹೊರಹಾಕಲು ಪ್ರತಿಭಾ ಕಾರಂಜಿ ವೇದಿಕೆಯಾಗಿದೆ ಎಂದು ಬೆಳಗಾವಿ ಸಿಟಿಇ ವಿಶ್ರಾಂತ ಸಹ ನಿರ್ದೇಶಕರಾದ ಎಂ. ಎಂ. ಸಿಂಧೂರ ಹೇಳಿದರು.

ಅವರು ಶನಿವಾರ ಬನಹಟ್ಟಿಯ ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ನಂ. 1 ರಲ್ಲಿ ಹಮ್ಮಿಕೊಂಡ ಉರ್ದು ಸಮೂಹ ಸಂಪನ್ಮೂಲ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಿ ಮಾತನಾಡಿದರು. ಮಕ್ಕಳಲ್ಲಿನ ಪ್ರತಿಭೆ ಗುರುತಿಸಿ ಬೆಳೆಸುವ ಕಾರ್ಯವನ್ನು ಶಿಕ್ಷಕರು ಮಾಡಬೇಕು.

ಶಿಕ್ಷಕರು ತಾವು ಹೊಸದನ್ನು ಕಲಿಯುವುದರ ಮೂಲಕ ಮಕ್ಕಳಿಗೂ ಹೊಸದನ್ನು ಕಲಿಸಬೇಕು. ಓದು ಮಾತ್ರ ಜೀವನವಲ್ಲ. ಪ್ರತಿಯೊಂದು ಚಟುವಟಿಕೆಗಳು ನಮ್ಮ ಭವಿಷ್ಯಕ್ಕೆ ಸಹಾಯಕಾರಿಯಾಗಿವೆ. ಆ ದಿಶೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಎಲ್ಲ ಚಟುವಟಿಕೆಗಳಲ್ಲಿ ಭಾಗವಹಿಸುವಂತಾಗಬೇಕು ಎಂದರು.

ಉರ್ದು ಶಿಕ್ಷಣ ಸಂಯೋಜಕರಾದ ಸಮೀನಾ ಕೌಸರ ಸೌದಾಗರ ಪ್ರಾಸ್ತಾವಿಕವಾಗಿ ಮಾತನಾಡಿದರು.


ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ. ಅಧ್ಯಕ್ಷ ಬಾಬುಲಾಲ ಬೂದಿಹಾಳ ವಹಿಸಿದ್ದರು. ಸಮಾರಂಭದಲ್ಲಿ ಅಂಜುಮನ್ ಸಂಸ್ಥೆ ಅಧ್ಯಕ್ಷ ಬುಡನ್ ಜಮಾದಾರ, ಯುನೂಸ್ ನಿಪ್ಪಾಣಿ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ಹನಗಂಡಿ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅರ್ಜುನ ಕಾಖಂಡಕಿ, ಪ್ರಶಾಂತ ಹೊಸಮನಿ, ಆಯ್. ಎ. ಡಾಂಗೆ, ಎಂ. ಎಚ್. ಲಾಡಖಾನ, ಬಿ. ಬಿ. ಮುಧೋಳ, ಎಲ್. ಎ. ಹಂಜಗಿ,

ಇರ್ಷಾದ್ ಮೋಮೀನ, ಎಸ್. ಐ. ಹಿಪ್ಪರಗಿ, ಮುಖ್ಯ ಗುರುಗಳಾದ ಎ. ಎಂ. ಫಣಿಬಂದ, ಬಿ. ಡಿ. ನೇಮಗೌಡ, ಎ. ಆಯ್. ಬಾಗೇವಾಡಿ, ಡಿ. ಬಿ. ಜಾಯಗೊಂಡ, ಮಲ್ಲಿಕಾರ್ಜುನ ಗಡೆನ್ನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಂಸ್ಕೃತಿ ಪರಂಪರೆಯನ್ನು ಉಳಿಸಿಕೊಂಡು ಬನ್ನಿರಿ: ದಾಸಬಾಳ ಶ್ರೀಗಳು

**ಇಳಕಲ್ :** ಭಾರತದ ಸಂಸ್ಕೃತಿ ಪ್ರಪಂಚದಲ್ಲಿ ತನ್ನದೇ ಹೆಸರು ಮಾಡಿದ್ದು ಅದನ್ನು ಯಥಾವತ್ತಾಗಿ ಉಳಿಸಿಕೊಂಡು ಬೆಳೆಸಿಕೊಂಡು ಬರಬೇಕೆಂದು ಸದ್ಗುರು ವೀರೇಶ್ವರ ಶ್ರೀಗಳು ನುಡಿದರು.

ಅವರು ದಾಸಬಾಳ ಗ್ರಾಮದ ಸದ್ಗುರು ಶ್ರೀ ದಾಸಬಾಳಧೀಶ್ವರ ಮಠದಲ್ಲಿ ಶ್ರೀ ವೀರೇಶ್ವರ ಮಠ, ದಾಸೋಹ ಭವನ,ಈಶ್ವರ ಮತ್ತು ಬಸವಣ್ಣನವರ ಮೂರ್ತಿ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡುತ್ತ ಶರಣರ ಸಂಸ್ಕೃತಿ ಅದ್ಭುತವಾಗಿದ್ದು ಅವುಗಳನ್ನು ಮಠ ಮಂದಿರದಲ್ಲಿ ನೋಡಬಹುದಾಗಿದೆ ಎಂದರು.



ಬಸವ ಶಾಸ್ತ್ರಿ , ಮುತ್ತು ಶಾಸ್ತ್ರಿ ಸಿದ್ದಲಿಂಗಯ್ಯ ಶಾಸ್ತ್ರಿ ಮತ್ತು ಬಸವರಾಜ ಶಾಸ್ತ್ರಿಗಳು. ಹೋಮ – ಹವನಗಳನ್ನು ಶ್ರೀ ರುದ್ರ ಅತಿ ರುದ್ರಯಾಗವನ್ನು ವ್ಯವಸ್ಥಿತವಾಗಿ ಬೆಳಿಗ್ಗೆಯಿಂದಲೇ ಮಧ್ಯಾಹ್ನ ಎರಡು ಗಂಟೆವರೆಗೆ ನಡೆಸಿಕೊಟ್ಟರು. ಭೀಮನಗೌಡ ಗೌಡರ, ಶಹಾಪುರದ ರಾಜಯೋಗ ಶಿವಶರಣರು, ಮುತ್ತಣ್ಣ ಹೊಸಮನಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದ ಸೇವೆಯಲ್ಲಿ ಪಾಲ್ಗೊಂಡ ಗಣ್ಯರನ್ನು ಗೌರವಿಸಿ ಸತ್ಕರಿಸಲಾಯಿತು.

ಪೂರ್ಣಿಮಾ ಗೊರಜನಾಳ ಪ್ರಾರ್ಥನೆ, ಅಂದಾನಪ್ಪ ಹವಾಲ್ದಾರ ಸ್ವಾಗತಿಸಿದರು ಶ್ರೀ ಮಠದ ವಕ್ತಾರ ಮಲ್ಲಪ್ಪ ಉಪನಾಳ ನಿರೂಪಿಸಿದರು, ಬಸವನಗೌಡ ಗೌಡದ ವಂದಿಸಿದರು.

# ನಿವೃತ್ತಿ ಶಿಕ್ಷಕ ಅಮೀರ ಹಮ್ಜಾ ನದಾಫ್‌ಗೆ ಸನ್ಮಾನ



**ಕೊಪ್ಪಳ :** ನಗರದ ಸಾಹಿತ್ಯ ಭಾವನ ದಲ್ಲಿ ಜಿಲ್ಲಾ ಆಡಳಿತ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಏರ್ಪಡಿಸಿದ ಶಿಕ್ಷಕರ ದಿನಾಚರಣೆಯಲ್ಲಿ ಸೆ 5 ಗುರುವಾರದಂದು ನಿವೃತ್ತಿ ವೃತ್ತಿ ಶಿಕ್ಷಕ ಅಮೀರ್ ಹಮ್ಜಾ ನದಾಫ್ ರವರಿಗೆ ಸನ್ಮಾನಿಸಲಾಯಿತು.

ಅಮೀರ್ ಹಮ್ಜಾ ನದಾಫ್ ರವರು ವೃತ್ತಿ ಶಿಕ್ಷಕರಾಗಿ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಕಳೆದ ಮೂರು ದಶಕದಿಂದ ಉತ್ತಮ ಸೇವೆ ಸಲ್ಲಿಸಿ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿ ಜನ ಮೆಚ್ಚಿನ ಶಿಕ್ಷಕರಾಗಿ ಕಾರ್ಯನಿರ್ವಹಿಸಿ ಇತ್ತೀಚಿಗಷ್ಟೇ ನಿವೃತ್ತಿ ಹೊಂದಿದ್ದರು ಅವರ ಉತ್ತಮ ಸೇವೆಯನ್ನು ಪರಿಗಣಿಸಿ ಶಿಕ್ಷಕರ ದಿನಾಚರಣೆಯಲ್ಲಿ ಅವರನ್ನು ವಿಶೇಷ ಸನ್ಮಾನ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಅಪಾರ ಶಿಕ್ಷಕ ಜನಸ್ತೋಮ ಜಿಲ್ಲಾ ಉಪ ನಿರ್ದೇಶಕರಾದ ಶ್ರೀಶೈಲಪ್ಪ ಬಿರಾದಾರ್, ಟಿ ಎಸ್ ಶಂಕ್ರಯ್ಯ ಬಿ ಇ ಓ ಕೊಪ್ಪಳ ವಿಷಯ ಪರಿವೀಕ್ಷಕರು, ಬಿ ಆರ್ ಪಿ ,ಸಿ ಆರ್ ಪಿ, ದೈಹಿಕ ಶಿಕ್ಷಣ ಪರಿವೀಕ್ಷಕರು ಹಲವಾರು ಗಣ್ಯರು ಉಪಸ್ಥಿತರಿದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State